# ಯಜುಸ್ಸಂಧ್ಯಾಭಾಷ್ಯವಿವರಣಂ

ಸಂಪಯುಂ

ಆಪ್ಪಾಥೂರಿ ನರಸಿಂಹಾಚಾರ್ಯರಿಂದ

ರಚಿತವಾದುದು

[ದ್ವಿತೀಯಮುದ್ರಣ.]

ಬೆಂಗಳೂರು ಸಿಟಿ

ಬಂಗಲೋರ್ ಪ್ರೆಸ್ನಲ್ಲಿ ಮುದ್ರಿಸಲ್ಪಟ್ಟಿತು

1930

*Registered Copy Right*

ಕ್ರಯ ೧ ಅಣೆ

ಶ್ರೀ

## ದ್ವಿತೀಯಮುದ್ರಣ

# ವಿಜ್ಞಾಪನೆ.

ಯಜುಸ್ಸಂಧ್ಯಾಭಾಷ್ಯವಿವರಣದ ಒಂದು ಸಾವಿರ ಪ್ರತಿಗಳೂ ಮುಗಿದು ಹೋಗಿ ಮತ್ತೆ ಅಚ್ಚಾಗಬೇಕಾಗಿ ಬಂದುದು ಸಂತೋಷಕರವಾದ ವಿಷಯ; ಅರ್ಥವನ್ನು ತಿಳಿದುಕೊಂಡು ಸಂಧ್ಯಾವಂದನೆಯನ್ನು ಮಾಡಬೇಕೆನ್ನುವ ಅಭಿಲಾಷೆಯು ಜನಗಳಲ್ಲಿ ಹೆಚ್ಚಾಗಿದೆಯೆಂದು ಇದರಿಂದಲೇ ವ್ಯಕ್ತವಾಯಿತು.

ಈ ಪುಸ್ತಕವನ್ನು ಬರೆದ ನಮ್ಮ ತಂದೆಗಳಾದ ಬ್ರ. ಶ್ರೀ. ಪ್ಲೀಡರ್ ಎಂ. ಎ. ನರಸಿಂಹಾಚಾರ್ಯರವರು ಇದು ಮುದ್ರಣವಾದ ಎರಡು ವರ್ಷ ಕಾಲದಲ್ಲೇ ಪರಂಧಾಮವನ್ನೈದಿದರು. ಪುಸ್ತಕವು ಇನ್ನು ಪ್ರಚಾರಕ್ಕೆ ಬಂದು, ಒಳ್ಳೆಯ ಅಭಿಪ್ರಾಯಗಳಿಂದ ಕೂಡಿ, ತಿರಗಿ ಮುದ್ರಣವಾಗಿ ಜನಾದರವನ್ನು ಹೊಂದುವ ಯೋಗವನ್ನು ಅವರ ಮಕ್ಕಳಾದ ನಾವುಗಳು ಪಡೆದೆವು.

ಮೊದಲನೆಯ ಮುದ್ರಣವು ನಿವೃತ್ತ ಡೆಪ್ಯುಟಿ ಕಮಿಷನರ್ ಶ್ರೀಮಾನ್ ಎಂ. ಎ. ನಾರಾಯಣಯ್ಯಂಗಾರ್ಯರವರ ಸಹಾಯದಿಂದ ಆದಂತೆಯೇ, ಎರಡನೆಯ ಮುದ್ರಣವು ಅವರ ತಮ್ಮಂದಿರಾದ ಶ್ರೀಮಾನ್ ಎಂ. ಎ. ಶ್ರೀನಿವಾಸಯ್ಯಂಗಾರ್ಯರವರ ಸಹಾಯದಿಂದ ಆಗಿರುತ್ತದೆ.

ಮೇಲುಗೋಟೆಯ ಶ್ರೀಯತಿರಾಜಮಠದ ಪೀಠವನ್ನು ಅಲಂಕರಿಸಿರುವ ಶ್ರೀ. ಶ್ರೀ. ಯತಿರಾಜ ಸ್ವಾಮಿಗಳೂ, ದಿವಂ

ಗಳಾದ ಲೋಕವಿಖ್ಯಾತರಾದ ಶ್ರೀ ಪ್ರೊಫೆಸರ್ ಎಂ. ರಂಗಾಚಾರ್ಯರವರು, ಆಸ್ಥಾನಮಹಾವಿದ್ವಾನ್ ಪಂಡಿತರತ್ನಂ ಕಸ್ತೂರಿ ಅಯ್ಯಂಗಾರ್ಯಸ್ವಾಮಿಗಳೂ ಈ ಪುಸ್ತಕದ ಮುಖಾಂತದಲ್ಲಿ ಕೊಟ್ಟಿರುವ ಅಭಿಪ್ರಾಯಗಳನ್ನು ಸರ್ವತ್ರ ವಾಚಕರ ಗಮನಕ್ಕೆ ತಂದಿರುವೆವು.

ಬೆಂಗಳೂರು
೨೫-೧-೧೯೩೦

# ಅವತಾರಿಕೆ.

ಸಂಧ್ಯಾವಂದನೆ ಮಾಧ್ಯಾಹ್ನಿಕಗಳೆಂಬಿವು ಅಯಾಗದು ಪ್ರತಿದಿನವೂ ಎರಡು ಸಂಧಿಗಳಲ್ಲಿಯೂ ಮಧ್ಯಾಹ್ನದಲ್ಲಿಯೂ ಮಾಡಬೇಕಾದ ನಿತ್ಯಾನುಷ್ಠಾನವು; ಈ ವೇದೋಕ್ತವಾದ ಕರ್ಮಗಳನ್ನು ದ್ವಿಜರೆಲ್ಲರೂ ಮಾಡಿಯೇ ತೀರಬೇಕೆಂದು ಹಿಂದಿನ ಕಟ್ಟಳೆಯನ್ನು ಮಾಡಿದ್ದಾರೆ; ಇದನ್ನು ಮಾಡದಿರುವ ಯಾವನಾಗಲಿ ಅಶುಚಿಯಾಗುವನೆಂದಲೂ, ಇತರ ವೈದಿಕಕರ್ಮಗಳನ್ನು ಮಾಡುವುದಕ್ಕೆ ಯೋಗ್ಯನಲ್ಲನೆಂದಲೂ, ಬೇರಾವ ಕರ್ಮಗಳನ್ನು ಮಾಡಿದರೂ ಆ ಫಲವನ್ನು ಅನುಭವಿಸುವನಲ್ಲನೆಂದಲೂ ವ್ಯಾಸಸ್ಮೃತಿಯಲ್ಲಿ ಹೇಳುತ್ತದೆ. ಸಂಧ್ಯಾವಂದನಾದಿಕರ್ಮಗಳನ್ನು ಮಾಡದಿರುವವನ್ನು ವೇದಗಳು ಕೂಡ ಪುನೀತನನ್ನಾಗಿ ಮಾಡಲಾರವೆಂದಲೂ ಉಕ್ತವಾಗಿರುವುದು.

ಸಕಲಲೋಕಗಳನ್ನೂ ಪರಿಪಾಲಿಸುತ್ತ, ವಿವೇಕವನ್ನು ಕೊಟ್ಟು, ಇದು ಒಳ್ಳೆಯದು, ಇದು ಕೆಟ್ಟದೆಂದು [illegible]

ಗಳನ್ನು ತೋರಿಸಿ, ಅವ್ಯಕ್ತವಾದ ಸಂಚಿತಪಾಪಗಳ ಮೂಲಕ ನಮ್ಮ ಬುದ್ಧಿಯನ್ನು ಪ್ರಕಾಶಗೊಳಿಸುವ ಆ ಪರಮಾತ್ಮನ ಮಿತಿಯಿಲ್ಲದ ಕಲ್ಯಾಣಗುಣಗಳನ್ನು ಸ್ತುತಿಸುವುದೂ ಒಂದೇ ದಿವಸವಾದರೂ ಬಿಡದೆ ನೆನೆಯುವುದು ಉಚಿತವೇ! ಒಂದೆರಡು ಕಾಸುಗಳನ್ನು ಕೊಟ್ಟು ಪಾಲಿಸುವ ಕೇವಲ ಮನುಷ್ಯಮಾತ್ರನಾದವನ ಕಟ್ಟಳೆಗೆ ಹೆದರಿ, ಇತರ ಕೆಲಸಗಳನ್ನಾದರೂ ಬಿಟ್ಟು, ಹೊಟ್ಟೆಗಾಗಿ ಅವನ ಸೇವೆಯನ್ನು ಮಾಡುವ ನಾವು, ಚರಾಚರಾತ್ಮಕವಾದ ಪ್ರಪಂಚವೆಲ್ಲವನ್ನೂ ಸೃಷ್ಟಿಸಿ ಸಕಲಭೋಗ್ಯವಸ್ತುಗಳನ್ನು ಕೊಟ್ಟು ಪಾಲಿಸುವ ಆ ಪರಮಾತ್ಮನನ್ನು ಎಷ್ಟು ಸೇವೆ ಮಾಡಿದರೂ ಸ್ವಲ್ಪವೇ.

ಸಂಧ್ಯಾವಂದನೆಯನ್ನು ಮಾಡುವವರಲ್ಲಿ ಹಲವರು ಅನಾಚಾರಕ್ಕೆ ಗುರಿಯಾಗುವೆವೆಂಬ ಭಯದಿಂದ ಕೆಲವು ಮಂತ್ರಗಳನ್ನು ಹೇಳಿಕೊಂಡು ಅಷ್ಟು ನೀರನ್ನೆರಚುವರು. ಹೀಗೆ ಮಾಡುವುದು ವಂದನೆಯೆನಿಸುವುದೇ? ಎಲ್ಲಾ ಕಾರ್ಯಗಳಿಗಿಂತಲೂ ಮುಖ್ಯವಾದ ದೇವತಾನಮಸ್ಕಾರದಲ್ಲಿಯೇ ಇಷ್ಟು ಆಲಸ್ಯವೂ ಅನಾದರವೂ ಉಂಟಾಗಬಹುದೇ?

ನಮಗೆ ತಿಳಿಯದ ವೇದಮಂತ್ರಗಳಿಂದಲೇ ಏಕೆ ದೇವರನ್ನು ಸ್ತುತಿಸಬೇಕು; ನಮ್ಮ ದೇಶಭಾಷೆಯಿಂದಲೇ ಏಕೆ ಸ್ತುತಿಸಬಾರದು ಎಂದು ಸಾಮಾನ್ಯವಾಗಿ ಕೆಲವರು ಆಕ್ಷೇಪಿಸಬಹುದು. ಕೇವಲಭಕ್ತಿಯುಕ್ತರಾಗಿ ಭಗವತ್ಸಾಕ್ಷಾತ್ಕಾರವನ್ನು ಹೊಂದಿದ್ದ ಹಿಂದಿನಕಾಲದ ಋಷಿಗಳು ಸುಸ್ವರವರ್ಣಗಳಿಂದ ಕೂಡಿದ ಮಂತ್ರಗಳಿಂದ ಪರಮಾತ್ಮನ ಗುಣಗಳನ್ನು ಕೊಂಡಾಡಿರುವರು; ಆ ಮಂತ್ರಗಳನ್ನು ಉಚ್ಚಾರಣೆ ಮಾಡುವುದರಿಂದ ಉಂಟಾಗುವ ಶ್ರೇಯಸ್ಸು, ಕೇವಲಕಲ್ಪಿತವಾದ ನಮ್ಮ ಮಾತುಗಳಿಂದ ಉಂಟಾಗುವುದಿಲ್ಲ. ಎಂದರೆ ಆ ಮಂತ್ರಗಳಲ್ಲಿರುವ ಶಕ್ತಿಯು ಭಾಷಾಂತರದಲ್ಲಿ ಉಂಟಾಗುವುದಿಲ್ಲ.

ಅರ್ಥವನ್ನು ತಿಳಿಯಲಿ, ತಿಳಿಯದಿರಲಿ ಸಂಧ್ಯಾವಂದನಾದಿಗಳನ್ನು ಮಾಡಬೇಕೆಂಬ ಹಿರಿಯರ ಆಶಯದಂತೆ

ನಡೆಯುತ್ತಾಬಂದಿರುವುದು. ನಾವೆಲ್ಲರೂ ಆದ ಆಸ್ತಿಕಶಿರೋಮಣಿ-ಗಳು ಈ ಮಂತ್ರಗಳ ಅರ್ಥವನ್ನರಿತು. ಮಂತ್ರಕರ್ತೃಗಳಾದ ಋಷಿಗಳು ಎಷ್ಟು ಭಕ್ತ್ಯತಿಶಯದಿಂದ ಭಗವಂತನನ್ನು ಹೊಗಳಿದರು. ಆ ಭಗವಂತನ ಮಾಹಾತ್ಮ್ಯವೆಂತಹುದು ಎಂಬುದನ್ನು ತಿಳಿದುಕೊಳ್ಳಲಿ ಎಂಬೊಂದೇ ಅಭಿಪ್ರಾಯದಿಂದ ಅಲ್ಪ-ಮತಿಯಾದ ನಾನು ಮಹಾತ್ಮರಾದ ಮಂತ್ರಗಳಿಗೆ ಪೂರ್ವಿಕರ ವ್ಯಾಖ್ಯಾನಾದಿಗಳನ್ನನುಸರಿಸಿ ಆ ಅಭಿಪ್ರಾಯವನ್ನೇ? ಕನ್ನ-ಡದ ಭಾಷಾಂತರದಲ್ಲಿ ಬರೆದಿರುವೆನು.

ಇದು ನನ್ನ ಪ್ರಥಮಪ್ರಯತ್ನವಾದುದರಿಂದಲೂ, ಬುದ್ಧಿ-ಯಷ್ಟು ಕೇವಲ ಗೌರವಾದಿಗಳಾದುದರಿಂದಲೂ, ಇದರಲ್ಲಿ ಕಂಡು ಬರಬಹುದಾದ ಹಲವು ದೋಷಗಳನ್ನು ಮರೆತು, ಇದ-ರಲ್ಲಿರುವ ಗುಣಲೇಶವನ್ನು ಗ್ರಹಿಸಬೇಕೆಂದು ಸಜ್ಜನರನ್ನು ಕಾರುಣಿಕರೆಂದು ಪ್ರಾರ್ಥಿಸುವೆನು.

ಇತಿ

ಮಂಡ್ಯಂ ಅಣ್ಣಾಪ್ಪಂಗಾರ್ ನರಸಿಂಹಾಚಾರ್ಯ.

ಬೆಂಗಳೂರು, 16-9-11.

# ಶ್ರೀ ಯದುಗಿರಿ ಯತಿರಾಜಮಠದ ಪ್ರಶಸ್ತಿಪತ್ರವು.

ಶ್ರೀಮತೇ ರಾಮಾನುಜಾಯ ನಮಃ

ಯಜುರ್ವೇದಿಗಳ ಸಂಧ್ಯಾವಂದನವಿಧಾನವನ್ನು ತಿಳಿಸುವ ಈ ಪುಸ್ತಕವು ಸಂಸ್ಕೃತಭಾಷೆಯನ್ನು ತಿಳಿಯದವರಿಗೆ ಬಹಳ ಉಪಕಾರವಾಗಿರುವುದು. ದೇಶಭಾಷೆಯಾದ ಕನ್ನಡದಲ್ಲಿ ಮಂತ್ರಗಳಿಗೆ ಸರಳವಾಗಿ ಅರ್ಥವು ನಿರೂಪಿತವಾಗಿ, ಅದಕ್ಕೆ ತಕ್ಕ ವಿಧಾನವು ಇದರಲ್ಲಿ ಚೆನ್ನಾಗಿ ತೋರಿಸಲ್ಪಟ್ಟಿರುವುದು.

"ಅರ್ಥವನ್ನು ತಿಳಿಯದೆ ಬರಿ ಬಾಯಿಪಾಠದಿಂದ ಸ್ವರವನ್ನು ಹೇಳುವುದು" ಎಂದು ಹೇಳುವ ಮಾತನ್ನು ಹೇಳುವರಿಗೆ ಇದು ಬಹಳ ಉಪಯೋಗವಾಗಿರುವುದು.

ಬಾಲ್ಯ ಮೊದಲು ವಿಧರ್ಮಿಗಳ ಸಹವಾಸದಿಂದ ಕರ್ಮಗಳನ್ನು ಬಿಟ್ಟು, ಸ್ವಧರ್ಮವನ್ನು ಆಚರಿಸದೆಯೂ, ವೇದಮಂತ್ರಗಳ ಸ್ವರೂಪವಿನಿಯೋಗಗಳನ್ನು ಸರಿಯಾಗಿ ತಿಳಿಯದೆಯೂ ಇರುವುದೇ ಮೇಲಿನ ಹೇಳ್ವ ಮಾತುಗಳಿಗೆ ಕಾರಣವಾಗಿರುವುದು.

ಈ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿಯೇ ಈ ಪುಸ್ತಕವನ್ನು ಬರೆದ ಮಹನೀಯರು ನಿತ್ಯಕರ್ಮಾನುಷ್ಠಾನಗಳಲ್ಲಿ ಶ್ರದ್ಧಾವಂತರಾಗಿ, ಗುರುಮುಖದಿಂದ ಮಂತ್ರಾರ್ಥವಿಧಾನಗಳನ್ನು ಚೆನ್ನಾಗಿ ಅರಿತು, ಪರೋಪಕಾರಾರ್ಥವಾಗಿ ಬರೆದಿರುವ ಈ ಪುಸ್ತಕದಲ್ಲಿ ಯಾವ ಬಗೆಯಾದ ಕೊರತೆಯೂ ಇರುವುದಿಲ್ಲ.

ಈ ಗ್ರಂಥಕಾರರು ಪರಂಧಾಮವನ್ನು ಹೊಂದಿ ಕೆಲಕಾಲವಾಗಿದ್ದರೂ ಇವರ ಪ್ರತಿಬಿಂಬಸ್ವರೂಪವಾದ ಈ ಪುಸ್ತಕದ ಪುನರ್ಮುದ್ರಣದಲ್ಲಿ ಶ್ರದ್ಧೆಯುಳ್ಳವರಿಗೆ ದೇವ

[illegible] ಪ್ರಾಮುಖ್ಯವಾಗಿರುವುದು.

[illegible] ಸಂವತ್ಸರದ ಜ್ಯೇಷ್ಠ
ಕೃಷ್ಣ ಷಷ್ಠೀ ಸೋಮ
ವಾರ [illegible]
[illegible]
[illegible]
[illegible]
ಬೆಂಗಳೂರು.

**ಶ್ರೀ[illegible]**

(ಒಂದು ಗ್ರಂಥದಿಂದೆತ್ತಿ
ಶ್ರೀ [illegible]
ಗಳ ಪತ್ರ [illegible] ಇದೆ.)

---

ಶ್ರೀಮತಾಂ [illegible] ಗ್ರಂಥ [illegible] [illegible] ಕೃತ್ವಾ [illegible]

[illegible]

[illegible]

Triplicane,
26-11-1911.

I have gone through Mr. Annadhorai Narasimhacharya's **Yajus-Sandhya-Bhashya-Vivarana** and am glad to be able to state that it gives in clear and lucid Kanarese the higher import of the morning, midday and evening Brahmanical prayers according to the Krishna-Yajurveda. The value of the booklet consists in the higher Vedantic thought which is, in accordance with the orthodox commentators, evolved out of the ancient Vedic **Manthras** and ritual formulas; and I have no doubt that the booklet will prove to be of considerable value in popularising the higher import of India's traditional Brahmanical daily prayers.

**M. Rangacharya,**
*Professor of Sanskrit.*

ಓಂ.

# ಯಜುಸ್ಸಂಧ್ಯಾಭಾಷ್ಯವಿವರಣಂ.

---

## ಪ್ರಾತಸ್ಸಂಧ್ಯಾವಂದನೆಯು.

ಅಧಿಕಾರಿಯು ಸ್ನಾನವನ್ನು ಮಾಡಿ, ಮಡಿಯುಟ್ಟು, ನಾಮವನ್ನು ಧರಿಸಿ, ಪೂರ್ವಾಭಿಮುಖನಾಗಿ ಕುಳಿತು, ಸಂಧ್ಯಾವಂದನೆಯನ್ನು ಮಾಡುವುದು.

ಇದರ ಕ್ರಮವೆಂತೆಂದರೆ:

೧. ಮೊದಲು ಆಚಮನಗಳೆರಡನ್ನು ಮಾಡುವುದು. ಆಚಮನ ಮಂತ್ರ:—

**ಕೇಶವಾಯನಮಃ, ನಾರಾಯಣಾಯನಮಃ, ಮಾಧವಾಯನಮಃ, ಗೋವಿಂದಾಯನಮಃ, ವಿಷ್ಣವೇನಮಃ, ಮಧುಸೂದನಾಯನಮಃ, ತ್ರಿವಿಕ್ರಮಾಯನಮಃ, ವಾಮನಾಯನಮಃ, ಶ್ರೀಧರಾಯನಮಃ, ಹೃಷೀಕೇಶಾಯನಮಃ, ಪದ್ಮನಾಭಾಯನಮಃ, ದಾಮೋದರಾಯನಮಃ.**

ಕೇಶವನೇ ಮೊದಲಾದ ಹನ್ನೆರಡು ಹೆಸರುಗಳು ಭಗವಂತನ ನಾಮಗಳು; ಈ ದ್ವಾದಶನಾಮಗಳನ್ನು ಧ್ಯಾನಿಸುತ್ತ, ಮೊದಲನೆಯ ಮೂರು ನಾಮಗಳಿಗೆ, ಒಂದೊಂದು ನಾಮೋಚ್ಚಾರಣೆಯಾದನಂತರವೂ ಒಂದೊಂದಾವೃತ್ತಿ ತೀರ್ಥವನ್ನು ತೆಗೆದುಕೊಂಡು, ಮಿಕ್ಕ ನಾಮಗಳನ್ನು ಹೇಳುವಾಗ ಕರನ್ಯಾಸಗಳನ್ನು ಮಾಡುವುದು.

ಸಂಧ್ಯಾವಂದನಾಧಿಕಾರಿಯು ಅಹಂಕಾರಮಮಕಾರಗಳನ್ನು ಬಿಟ್ಟು, ತಾನು ಭಗವಂತನಿಗೆ ಶೇಷಭೂತನೆಂದು ತಿಳಿದು ಅವನನ್ನು ಧ್ಯಾನಿಸುತ್ತ ಆಚಮನವನ್ನು ಮಾಡಿದರೆ ಆರೋಗ್ಯವೂ ಅಂತಶ್ಶುದ್ಧಿಯೂ ಕೈಗೂಡುವುದು.

೩. ಆಮೇಲೆ ಒಂದು ಪ್ರಾಣಾಯಾಮವನ್ನು ಮಾಡುವನು. ಪ್ರಾಣಾಯಾಮಮಂತ್ರ:—

**ಓಂಭೂಃ, ಓಂಭುವಃ, ಓಂಸುವಃ, ಓಂಮಹಃ, ಓಂಜನಃ, ಓಂತಪಃ, ಓಂಸತ್ಯಂ, ಓಂತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ, ಧಿಯೋಯೋನಃ ಪ್ರಚೋದಯಾತ್, ಓಂಆಪೋಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಂ.**

ಈ ಮಂತ್ರದಲ್ಲಿ **ಓಂಭೂಃ** ಎಂಬುದರಿಂದ **ಓಂ ಸತ್ಯಂ** ಎಂಬ ವರೆಗೂ ಬರುವ ಏಳು ಪದಗಳಿಗೂ "ವ್ಯಾಹೃತಿ" ಗಳೆಂದು ಹೆಸರು.

**ಓಂ ತತ್ಸವಿತುರ್ವರೇಣ್ಯಂ** ಎಂಬುದರಿಂದ **ಪ್ರಚೋದಯಾತ್** ಎಂಬ ವರೆಗೂ ಬರುವ ಇಪ್ಪತ್ತನಾಲ್ಕು ಅಕ್ಷರಗಳಿಂದ ಕೂಡಿರುವ ಮಂತ್ರಕ್ಕೆ "ಗಾಯತ್ರೀ" ಎಂದು ಹೆಸರು.

**ಓಂ ಆಪೋಜ್ಯೋತೀ** ಎಂಬುದರಿಂದ **ಸುವರೋಂ** ಎಂಬುದೇ ಕಡೆಯದಾಗಿ ಉಳ್ಳ ಮಂತ್ರವು "ಗಾಯತ್ರೀಶಿರಸ್ಸು" ಎಂದೆನ್ನಿಸುವುದು.

**ಓಂ** ಎಂದು ಮಂತ್ರದ ಆದಿಯಲ್ಲಿ ಬರುವ ಶಬ್ದವು "ಪ್ರಣವ" ಅಥವಾ "ಓಂಕಾರ" ವೆನ್ನಿಸುವುದು.

**ಭೂ** ಎಂಬುದರಿಂದ **ಸತ್ಯಂ** ಎಂಬುದರ ವರೆಗಿನ ಏಳು ಪದಗಳಿಗೂ ಕ್ರಮವಾಗಿ ಭೂಲೋಕ, ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕವೆಂಬ ಏಳು ಲೋಕಗಳೆಂದು ಅರ್ಥವು.

ಗಾಯತ್ರಿಯ ಅರ್ಥವು.

**ಯಃ** ಯಾವ, **ನಃ**-ನಮ್ಮ, **ಧಿಯಃ**-ಬುದ್ಧಿಗಳನ್ನು, ಶಾಸ್ತ್ರೋಪದೇಶವಿಷಯಗಳಲ್ಲಿ ಅನುಷ್ಠಾನಕ್ಕೆ ಬೇಕಾದ ವಿಷಯಗಳನ್ನು, **ಪ್ರಚೋದಯಾತ್** ಉಂಟುಮಾಡುವನೋ, ಪ್ರೇರಿಸುವನೋ, **ತತ್**-ಆ ಪ್ರಸಿದ್ಧನಾದ, **ಸವಿತುಃ** ಸೃಷ್ಟಿಕರ್ತನಾದ, **ದೇವಸ್ಯ**-ಸ್ವಯಂ ಪ್ರಕಾಶ ನಾರಾಯಣನ, ನಿರತಿಶಯತೇಜಸ್ಸಿನಿಂದ ಕೂಡಿದವನ, ಚೇತನಾಚೇತನಸ್ವರೂಪನಾದ ಜಗತ್ತಿನ ಸೃಷ್ಟಿಯಿಂದ ಎಂದೆನ್ನಿಸಿಕೊಂಡಿರುವನ, **ವರೇಣ್ಯಂ**-ಉತ್ತಮವಾದ, ಮಹಾತ್ಮರೆಲ್ಲರಿಂದಲೂ ಪ್ರಾರ್ಥಿಸ

ಲು ಯೋಗ್ಯವಾದ. ಭರ್ಗಃ-ಸ್ವರೂಪವನ್ನು, ತೇಜಸ್ಸನ್ನು, ಧೀಮಹಿ—(ಧ್ಯಾಯೇಮಹಿ)-ಧ್ಯಾನಮಾಡುತ್ತೇವೆ; ಓಂ-ಪರಬ್ರಹ್ಮನ, ಅಪಃ-ಜಲಗಳು, ಜ್ಯೋತಿಃ-ಅಗ್ನಿ ಮೊದಲಾದ ಭೂತಗಳು, ರಸಃ-ರಸ ಮೊದಲಾದ ವಿಷಯಗಳು, ಅಮೃತಂ-ಶಾಶ್ವತ, ಬ್ರಹ್ಮ-ಪ್ರಕೃತಿಯು, ಭೂರ್ಭುವಸ್ಸುವಃ-ಭೂರ್ಭುವಸ್ಸುವರ್ಲೋಕಗಳು, (ಇವುಗಳೆಲ್ಲವೂ) ಓಂ-ಪರ ಬ್ರಹ್ಮವೇ.

ಸ್ವಾರಸ್ಯವೇನೆಂದರೆ ಇದರಲ್ಲಿ ಅಡಗಿರುವುದು. 'ಓಂ' ಎಂಬುದರಲ್ಲಿ ಅ, ಉ, ಮ ಎಂಬ ಮೂರು ಅಕ್ಷರಗಳಿವೆ. ಅವುಗಳಲ್ಲಿ ಅಕಾರವು 'ಅವ ರಕ್ಷಣೇ' ಎಂಬ ಧಾತುವಿನಿಂದ ಸರ್ವವನ್ನೂ ಪಾಲಿಸುವ ಭಗವಂತನನ್ನು ಹೇಳುತ್ತದೆ. ಅಕಾರವು ಕಾರಣವಾಚಕವು; ಜ್ಞಾನ ಶಕ್ತಿ ಮುಂತಾದುವು ಕಾರಣತ್ವಕ್ಕೆ ಉಪಯುಕ್ತವಾದುವುಗಳು; ದಯಾ ಸ್ವಾತಂತ್ರ್ಯಾದಿಗಳು ರಕ್ಷಕತ್ವಕ್ಕೆ ಉಪಯುಕ್ತವಾದುವು; ಈ ಸಾಮ್ಯ ಗುಣಗಳೂ ಭಗವಂತನಲ್ಲಿ ಇರುವುವು. ಉಕಾರವು ಇಲ್ಲಿ ಅವಧಾರಣಾರ್ಥವು; ಉಕಾರಕ್ಕೆ ಲಕ್ಷ್ಮಿಯೆಂದೂ ಹೇಳುವರು; ಅವಧಾರಣೆಯೆಂದರೆ ನಿಶ್ಚಯವಾಗಿ ಹೇಳುವುದೆಂದು ತಾತ್ಪರ್ಯ; ಜೀವನು ಭಗವಂತನಿಗೊಬ್ಬನಿಗೇ ಶೇಷ ಭೂತನೆಂಬುದೇ ಅಭಿಪ್ರಾಯ; ಮಕಾರವು ಜೀವವಾಚಕವು; ಇದು ಇಪ್ಪತ್ತೈದನೆಯ ಅಕ್ಷರ; ಇದರಿಂದ ಜೀವನು ಇಪ್ಪತ್ತು ನಾಲ್ಕು ತತ್ವಗಳಿಗಿಂತಲೂ ಬೇರೆಯಾದವನೆಂದು ಅಭಿಪ್ರಾಯ; "ಮನ-ಜ್ಞಾನೇ" ಅಥವಾ "ಮನು-ಅವಬೋಧನೇ" ಎಂಬ ಧಾತುವಿನಿಂದ ಹುಟ್ಟಿದ ಮಕಾರಕ್ಕೆ ಜ್ಞಾನಸ್ವರೂಪವು ಹೇಳಲ್ಪಟ್ಟಿತು; ಇದರಿಂದ ಮಕಾರವಾಚ್ಯನಾದ ಜೀವನು ಜ್ಞಾನಸ್ವರೂಪನೆಂದಾಯಿತು; 'ಗಾಯಂತಂ ತ್ರಾಯತೇ' ಎಂದರೆ ಜಪಿಸುವವನನ್ನು ಕಾಪಾಡುವುದು ಎಂದು 'ಗಾಯತ್ರೀ' ಎಂಬುದರ ಅರ್ಥ; ಸರ್ವವನ್ನು ಪ್ರಕಾಶಪಡಿಸುವುದಕ್ಕೆ 'ಭರ್ಗಃ' ಎಂದು ಹೆಸರು. ಇದು ಅಜ್ಞಾನಾಂಧಕಾರವನ್ನು ಹೋಗಲಾಡಿಸುವ ತೇಜಸ್ಸು. 'ದಿವ್-ಕ್ರೀಡಾಯಾಂ' ಎಂಬ ಧಾತುವಿನಿಂದ ಹುಟ್ಟಿದ ದೇವ ಶಬ್ದಕ್ಕೆ ತನ್ನಿಂದ ನಿರ್ಮಿತವಾದ ಜಗದಲ್ಲಿ ಕ್ರೀಡಿಸುವ ಭಗವಂತನೆಂದು ಅರ್ಥ. ಮೇಲೆ ಹೇಳಿದ ಮಂತ್ರಗಳನ್ನು ಹೀಗೆ ಅರಿತು

ರನು ಹಗ್ಗದಿಂದ ಕಟ್ಟಿ ಆಡಿಸುತ್ತಾನೆಯೋ ಹಾಗೆಯೇ ಭಗವಂತನು ಜೀವರನ್ನು ಮಾಯಾಪಾಶದಿಂದ ಕಟ್ಟಿ ಕ್ರೀಡಿಸುತ್ತಾನೆಂದು ಹೇಳುವುದು. ಗಾಯತ್ರೀ ಶಿರಸ್ಸಿನ ಅಧ್ಯಾತ್ಮದಲ್ಲಿರುವ ಪ್ರಣವಗಳು ಸಕಲ ವಸ್ತುಗಳೂ ಪರಮಾತ್ಮನಲ್ಲಿಯೇ ಇವೆ ಎಂಬುದನ್ನು ತೋರಿಸುತ್ತವೆ. ವ್ಯಾಹೃತಿಗಳು ಜಗತ್ಕಾರಣನಾದ ದೇವನೇ ಉಪಾಸ್ಯನೆಂಬುದನ್ನು ತಿಳಿಸುತ್ತವೆ.

ಪ್ರಾಣಾಯಾಮವು ಯೋಗಾಭ್ಯಾಸಕ್ಕೆ ನಾಲ್ಕನೆಯ ಅಂಗವಾಗಿರುವುದು. ಇದನ್ನು ಮಾಡುವುದರಿಂದ ಆಯುಸ್ಸು ಆರೋಗ್ಯಗಳು ಬುದ್ಧಿಯೂ ಹೆಚ್ಚುತ್ತವೆ. ಜೀವನು ಪರಮಾತ್ಮನಿಗೆ ಶರಣಾಗತನಾದರೆ, ಪರಮಾತ್ಮನು ರಕ್ಷಿಸುವನೆಂದು ಪ್ರಣವಕ್ಕೆ ಅರ್ಥವು; 'ಕಾರಣಂ ತು ಧ್ಯೇಯಃ' ಎಂದು ಜಗತ್ಕಾರಣಭೂತನಾದ ದೇವನೇ ಉಪಾಸ್ಯನೆಂದು ತಿಳಿದು ಗಾಯತ್ರಿಯನ್ನು ಜಪಿಸುವವನು ತನ್ನ ಅನುಷ್ಠಾನದ ಮೂಲಕ ತೈಲಧಾರೆಯಂತೆ ಅವಿಚ್ಛಿನ್ನ ಸ್ಮೃತಿಸಂತಾನರೂಪವಾದ ಭಕ್ತಿಯೋಗವನ್ನು ತೋರಿಸುತ್ತಾನೆ. ಸೂರ್ಯಮಂಡಲಾಂತರ್ಗತನಾದ ತೇಜೋರೂಪಿಯಾದ ಭಗವಂತನನ್ನು ಧ್ಯಾನಿಸಬೇಕೆಂಬುದೇ ಗಾಯತ್ರೀಜಪದ ಪ್ರಯೋಜನ.

೩. ಸಂಕಲ್ಪವು:

**ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ ಪ್ರಾತಸ್ಸಂಧ್ಯಾವಂದನಂ ಕರಿಷ್ಯೇ.** ಎಂದರೆ ಭಗವಂತನ ಅಪ್ಪಣೆಯ ಮೇರೆಗೆ ಅವನ ಸೇವಾರೂಪವಾದ ಬೆಳಗಿನ ಸಂಧ್ಯಾವಂದನೆಯನ್ನು ಮಾಡುವೆನು ಎಂದರ್ಥ.

ಸಂಕಲ್ಪವೆಂದರೆ — ಯಾವ ಕೆಲಸವನ್ನು ಪದರೂ ನಾನು ಮಾಡುವೆನೆಂದು ಮನಸ್ಸಿನಲ್ಲಿ ಗೊತ್ತುಮಾಡಿಕೊಳ್ಳುವುದೆಂದು ಅರ್ಥವು.

೪. ಪ್ರೋಕ್ಷಣವು. ಇದರ ಮಂತ್ರ —

**ಆಪೋಹಿಷ್ಠಾ ಮಯೋಭುವಃ, ತಾನ ಊರ್ಜೇ ದಧಾತನ, ಮಹೇರಣಾಯ ಚಕ್ಷಸೇ, ಯೋ ವಃ ಶಿವತಮೋ ರಸಃ, ತಸ್ಯ ಭಾಜಯತೇ ಹ ನಃ, ಉಶತೀರಿವ ಮಾತರಃ, ತಸ್ಮಾ ಅರಂಗಮಾಮ ವೋ ಯಸ್ಯ ಕ್ಷಯಾಯ ಜಿನ್ವಥ, ಆಪೋ ಜನಯಥಾ ಚ ನಃ.**

ಹೇ ಆಪಃ—ಎಲೈ ಜಲಗಳೇ, ಪರಮಾತ್ಮನೇ, (ನೀನು) ಮಯೋಭುವಃ-(ವರ್ತಮಾನಕಾಲದ ಸ್ವಾಭಾವಿಕಾನಂದಗಳಿಂದ) ಸುಖಕ್ಕೆ ಕಾರಣವಾಗಿ, ಷ್ಠ (ಸ್ಥ)-ಆಗುತ್ತೀಯಲ್ಲವೆ! ತಾಃ-ಆ ನೀನು, ನಃ-ನಮಗೆ. ಮಹೇ(ಮಹತೇ)-ದೊಡ್ಡದಾದ, ರಣಾಯ(ರಮಣೀಯವಾದ)-ಚೆನ್ನಾಗಿರುವ, ಚಕ್ಷಸೇ (ಇಂದ್ರಿಯಗಳು)—ಇಂದ್ರಿಯಗಳಿಗೋಸ್ಕರ, ಊರ್ಜೇ (ಆಹಾರಂ)-ಅನ್ನವನ್ನು. ದಧಾತನ-ಕೊಡಿರಿ (ಧಾರಣಮಾಡಿರಿ) ವಃ-ನಿಮಗೆ, ಶಿವತಮಃ-ಮಂಗಳಕರವಾದ, ಯಃ-ಯಾವ, ರಸಃ-ರಸವಾಗಿರುವುದು ಇರುವುದೋ, ಇಹ-ಈ ಲೋಕದಲ್ಲಿ (ಈ ಜನ್ಮದಲ್ಲಿ), ನಃ-ನಮ್ಮನ್ನು, (ನಮಗೆ) ತಸ್ಯ-ಆ ರಸವನ್ನು, ಉಶತೀಃ-ಪ್ರೀತಿಯುಳ್ಳ, ಮಾತರ ಇವ-ತಾಯಿಗಳಂತೆ, ಭಾಜಯತ-ಹೊಂದಿಸಿರಿ; ಯಸ್ಯ-ಯಾವ ರಸದ, ಕ್ಷಯಾಯ (ನಿವಾಸಾಯ)—ಸ್ಥಿತಿಯನ್ನು ಕುರಿತು, ಜಿನ್ವಥ ಪ್ರೀತಿಯನ್ನು ಹೊಂದುವಿರೋ, ತಸ್ಮೈ-ಅದಕ್ಕೋಸ್ಕರ, (ಅದನ್ನು ಹೊಂದುವುದಕ್ಕಾಗಿ) ವಃ-ನಿಮ್ಮನ್ನು, ಅರಂ-ಅಧಿಕವಾಗಿ, ಗಮಾಮ-ಹೊಂದುತ್ತೇವೆ ; ಹೇ ಆಪಃ-ಎಲೈ ಜಲಗಳೇ, ನಃ-ನಮ್ಮನ್ನು, ಜನಯಥ-ಹುಟ್ಟಿಸುವವರನ್ನಾಗಿ ಮಾಡಿರಿ ; ಚ-ಮತ್ತು.

ಜಲವು ಸುಖಕ್ಕೆ ಕಾರಣವಾಗುತ್ತದೆಂಬುದನ್ನು ಲೋಕದಲ್ಲಿ ಬಲ್ಲರು. ಇಂದ್ರಿಯಗಳಿಗೆ ಪುಷ್ಟಿಯನ್ನೂ ಮಹತ್ವವನ್ನೂ ಅನ್ನದಿಂದುಂಟಾಗುವುದು ; ಜ್ಞಾನಿಯು ಜಲದಲ್ಲಿ ಪರಮಾತ್ಮನನ್ನು ಪ್ರತ್ಯಕ್ಷವಾಗಿ ಕಾಣುವುದು ಶಿವಕರವಾದ ಸುಖವನ್ನು ಕೊಡುವುದು. ಅಂತಹ ಪಾರಮಾತ್ಮ್ಯರಸವನ್ನು ಕೊಟ್ಟು ತನ್ನನ್ನು ಪ್ರೀತಿಸುವರೋ ಅವರೂ, ಮೋಕ್ಷಸಾಧನವಾದ ಭಕ್ತಿಯನ್ನು ತನ್ನಲ್ಲಿ ಉಂಟಾಗುವಂತೆ ಮಾಡಲು ಅಧಿಕಾರಿಯು ಜಲಾಂತರ್ಯಾಮಿಯಾದ ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತಾನೆ. ಈ ಮಂತ್ರವನ್ನು ಜಪಿಸುವುದರಿಂದ ಅನ್ನಪುತ್ರಾದಿಗಳಿಂದ ಪುಷ್ಟನಾಗುತ್ತಾ, ಸ್ವರ್ಗಭೋಗಮೋಕ್ಷಗಳಿಂದ ಅನುಗೃಹೀತನಾಗುತ್ತಾ ತನಗೆ ಅತಿಶಯದಿಂದ ದೇವರನ್ನು ಪ್ರಾರ್ಥಿಸಿದಂತಾಗುವುದು.

ಮೋಕ್ಷವನ್ನು ಬಯಸುವ ಅಧಿಕಾರಿಗಳಿಗೆ ಆ ಮೋಕ್ಷವನ್ನು ಪಡೆಯುವುದಕ್ಕೋಸ್ಕರವಾಗಿ ಶಾಸ್ತ್ರ ವಿಧಿಸಿದ ಉಪಾಯಗಳು

ಕೊನೆಗಾಣುವವರೆಗೂ ಬ್ರಹ್ಮವಿಕಾಸವು ಉಂಟಾಗಬೇಕು ; ಬ್ರಹ್ಮ ವಿಕಾಸಕ್ಕೋಸುಗ ದೇಹದಾರ್ಢ್ಯವೂ ಇಂದ್ರಿಯಪಾಟವವೂ ಅವಶ್ಯ ವಾಗಿ ಬೇಕು ; ದೇಹದಾರ್ಢ್ಯಕ್ಕಾಗಿ ಅನ್ನವು ಮುಖ್ಯವಾಗಿ ಎಲ್ಲರಿಗೂ ಬೇಕಾದುದು. ಅದಾದುದರಿಂದಲೇ 'ಅನ್ನೋ ವೈ ಸಃ' ಎಂದು ಉಪನಿ ಷತ್ತುಗಳು ಆ ಪರಮಾತ್ಮನನ್ನು ಕೊಂಡಾಡುತ್ತಿವೆ: ಇದರಿಂದ ಬ್ರಹ್ಮಲೋಕಸುಖವು ಬಹುಕಾಲದವರೆಗೆ ನಿಲ್ಲದು ; ಕೈವಲ್ಯ ದಿಂದುಂಟಾಗುವ ಆನಂದವು ಅತ್ಯಲ್ಪವಾದುದು ; ಆ ಪರಮಾತ್ಮನನ್ನು ಅನುಭವಿಸುವುದೇ ಅಧಿಕಮಂಗಳವಾದುದು ; ಅದೇ ಬಹಳ ಸುಖ ದಾಯಕವಾದುದು ಎಂದು ಹೇಳಬೇಕಾಯಿತು ; ಬ್ರಹ್ಮವಿದ್ಯೆಯನ್ನು ಸಾಧಿಸಿದ ಜನ್ಮವೇ ಉತ್ತಮವಾದುದು ; ಆ ವಿದ್ಯೆಯನ್ನು ಹೊಂದಿ ಸುವುದೇ ಮುಖ್ಯವೆಂತ ಮಾಡುವುದೇ ಇವರ ಅಭಿಪ್ರಾಯ ; ಹೇಗೆ ಬಾಳೇ ಜೀವನವಾಗಿರುವ, ಏನೂ ಅರಿಯದ, ಹಸುಗೂಸುಗಳಿಗೆ ಮೊಲೆ ತಾಯಿಯವರು ಅನ್ನ ಮೊದಲಾದುವನ್ನು ಕೊಟ್ಟು ಪೋಷಿಸುವರೋ ಹಾಗೆಯೇ ಬ್ರಹ್ಮಜ್ಞಾನವನ್ನರಿಯುವ ಕಡೆಗೆ ಸ್ವಾಭಾವಿಕಶಕ್ತಿಯಿಲ್ಲದ ಪರಮಾತ್ಮನು ಬ್ರಹ್ಮಜ್ಞಾನವನ್ನು ಕೊಟ್ಟು ಕಾಪಾಡಬೇಕೆಂದು ಶ್ರೀ ಮನ್ನಾರಾಯಣನನ್ನು ಅಧಿಕಾರಿಯು ಪ್ರಾರ್ಥಿಸುತ್ತಾನೆಂಬುದೇ ಈ ಮಂತ್ರದ ಮುಖ್ಯತಾತ್ಪರ್ಯವು.

೫. ಆಪೋಶನದ ಜಪದ ಮಂತ್ರವು :—

**ಸೂರ್ಯಶ್ಚ ಮಾಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ ಪಾಪೇಭ್ಯೋ ರಕ್ಷಂತಾಂ ಯದ್ರಾತ್ರ್ಯಾ ಪಾಪಮಕಾರ್ಷಂ ಮನಸಾ ವಾಚಾ ಹಸ್ತಾಭ್ಯಾಂ ಪದ್ಭ್ಯಾಮುದರೇಣ ಶಿಶ್ನಾ ರಾತ್ರಿ ಸ್ತದವಲುಂಪತು ಯತ್ಕಿಂಚ ದುರಿತಂ ಮಯಿ ಇದಮಹಂ ಮಾಮಮೃತಯೋನೌ ಸೂರ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ.**

ಸೂರ್ಯಶ್ಚ-ಸೂರ್ಯಾಂತರ್ಗತಪರಮಾತ್ಮನೂ, ಮನ್ಯುಶ್ಚ-ಕೋಪವೂ, ಮನ್ಯುಪತಯಶ್ಚ-ಕೋಪಕ್ಕೆ ಸ್ವಾಮಿಗಳಾದ ರಾಗದ್ವೇಷಾದಿಗಳೂ, ಮಾ-ನನ್ನನ್ನು, ಮನ್ಯುಕೃತೇಭ್ಯಃ-ಕೋಪದಿಂದ ಮಾಡಿದ,

ಪಾಪೇಭ್ಯಃ-ಪಾಪಗಳತ್ತಣಿಂದ, ರಕ್ಷಂತಾಂ-ಕಾಪಿಡಲಿ, ರಾತ್ರ್ಯಾ-ರಾತ್ರಿಯಲ್ಲಿ, ಮನಸಾ-ಚಿತ್ತದಿಂದಲೂ, ವಾಚಾ-ವಾಕ್ಕಿನಿಂದಲೂ, ಹಸ್ತಾಭ್ಯಾಂ-ಕೈಗಳಿಂದಲೂ, ಪದ್ಭ್ಯಾಂ-ಕಾಲುಗಳಿಂದಲೂ, ಉದರೇಣ-ಹೊಟ್ಟೆಯಿಂದಲೂ, ಶಿಶ್ನಾ-ಪುರುಷರ ಗುಹ್ಯದಿಂದಲೂ, ಯತ್-ಯಾವ, ಪಾಪಂ-ಪಾಪವನ್ನು, ಅಕಾರ್ಷಂ ಮಾಡಿದೆನೋ, ತತ್-ಆ ಪಾಪವನ್ನು, ರಾತ್ರಿಃ-ರಾತ್ರಿಗೆ ಅಭಿಮಾನಿಯಾದ ಭಗವಂತನು, ಅವಲುಂಪತು-ಇಲ್ಲದಂತೆ ಮಾಡಲಿ, ಹೋಗಲಾಡಿಸಲಿ; ಮಯಿ-ನನ್ನಲ್ಲಿ, ಯತ್ಕಿಂಚ-ಯಾವ ಅಲ್ಪವಾದ, ದುರಿತಂ-ಪಾಪವನ್ನು, (ಅವಲುಂಪತು) ಹೋಗಲಾಡಿಸಲಿ, ಅಹಂ-ನಾನು, ಇದಂ-ಈ, ಮಾಂ-ನಾನೆಂಬ ಆತ್ಮವಸ್ತುವನ್ನು, ಅಮೃತಯೋನೌ-ಮೋಕ್ಷಕ್ಕೆ ಕಾರಣವಾದ, ಸುಖಾಧಿಕರಣವಾದ, ಜ್ಯೋತಿಷಿ-ತೇಜೋರೂಪವಾದ, ಸೂರ್ಯೇ-ಸೂರ್ಯನಾಮಕನಾದ ಭಗವಂತನಲ್ಲಿ, ಜುಹೋಮಿ-ಹೋಮಮಾಡುವೆನು. ಸ್ವಾಹಾ-ಇದು ಹೋಮಮಂತ್ರವು, ಸಮರ್ಪಣಮಂತ್ರವು.

ಸುಷ್ಠು ಈರಯತಿ (ಪ್ರೇರಯತಿ) ಇತಿ ಸೂರ್ಯಃ ಎಂದರೆ ಚೇತನರಿಗೆ ಚೆನ್ನಾಗಿ ಪ್ರೇರಣೆಯನ್ನು ಮಾಡುವ ಪರಮಾತ್ಮನೆಂದು ಅರ್ಥ. “ರಾತ್ರೀಯಂತೇ ಯಸ್ಮಿನ್ ಭೂತಾನಿ ಸರ್ವಾಂತರಾಣಿ” ಆಶ್ರಯಿಸಿದ ವಸ್ತುಗಳು ಯಾವನಿಂದ ರಕ್ಷಿಸಲ್ಪಡುತ್ತವೋ ಅಂತಹ ಪರಮಾತ್ಮನಿಗೆ ರಾತ್ರಿಯೆಂದು ಹೆಸರು. ತ್ರಿಕರಣಗಳಿಂದ ಮಾಡಿದ ಪಾಪಗಳನ್ನೂ, *ಪೂರ್ವಾಘ ಉತ್ತರಾಘಗಳನ್ನೂ ನಾಶ ಹೋಗಲಾಡಿಸಿ ನನ್ನನ್ನು ಪೊರೆಯಬೇಕೆಂದು ಚೇತನನು ಮಾಡುವ ಭಗವತ್ಪ್ರಾರ್ಥನೆಯು ಇದು. “ಮನಸಾ ವಾಚಾ ಹಸ್ತಾಭ್ಯಾಂ” ಎಂಬುದರಲ್ಲಿರುವ ‘ಮನಸಾ’ ಶಬ್ದಕ್ಕೆ ಇಂದ್ರಿಯಗಳೆಂದು ಅರ್ಥವು.

ಅಧಿಕಾರಿಯು ಶ್ರೀಮತ್ಪ್ರಣವರೂಪವೆಂಬ ಯಾಗದಲ್ಲಿ, ಆತ್ಮನೆಂಬ ಹವಿಸ್ಸನ್ನು ಭಗವಂತನೆಂಬ ಅಗ್ನಿಯಲ್ಲಿ ಹೋಮಮಾಡುವನು.

---

* ಗುರುವಿನ ಉಪದೇಶದಿಂದ ಜ್ಞಾನವನ್ನು ಪಡೆದಮೇಲೆ ಮಾಡಿದ ಪಾಪವು ಉತ್ತರಾಘವೆನಿಸುವುದು; ಅದಕ್ಕೆ ಹಿಂದೆಯೇ ಮಾಡಿದ ಪಾಪವು ಪೂರ್ವಾಘವೆನಿಸುವುದು.

ಎಂದರೆ ಆತ್ಮನನ್ನು ಭಗವಂತನ ಪಾದಾರವಿಂದಗಳಲ್ಲಿ ಸಮರ್ಪಣೆ ಮಾಡುವನೆಂದು ಭಾವವು. ಜೀವನನು ಪ್ರಪತ್ತಿಮಾರ್ಗವನ್ನು ಅವಲಂಬಿಸಿದರೆ ವಾತ್ಸಲ್ಯಜಲಧಿಯಾಗಿಯೂ ಆಪತ್ಸಂರಕ್ಷಕನಾಗಿಯೂ ಇರುವ ಪರಮಾತ್ಮನು ಜೀವನನ್ನು ಹೊಂದಿರುವ ತಡೆಗಳೆಲ್ಲವನ್ನೂ ಪರಿಹರಿಸಿ ಸ್ವಾನುಭವವನ್ನು ಕರುಣಿಸುವನು. ಹೇಗೆಂದರೆ ಒಂದು ದೇವತೆಯನ್ನು ಕುರಿತು ಮಾಡುವ ದ್ರವ್ಯತ್ಯಾಗವು. ಇಲ್ಲಿ ಸರ್ವಶೇಷಿಯಾದ ಪರಮಾತ್ಮನೇ ನಿರುಪಾಧಿಕನಾದ ದೇವತೆಯು; ಶೇಷನಾದ ಆತ್ಮನೇ ನಿರುಪಾಧಿಕವಾದ ಹವಿಸ್ಸೆಂಬ ದ್ರವ್ಯವು; ಆತ್ಮಸಮರ್ಪಣೆಯೇ ನಿರುಪಾಧಿಕವಾದ ತ್ಯಾಗವು; ಮೋಕ್ಷವೇ ನಿರುಪಾಧಿಕವಾದ ಫಲವು. ಅಕಿಂಚನನಾಗಿ ಅನನ್ಯಗತಿಕನಾಗಿ ನಿನ್ನನ್ನು ಹೊಂದಲು ನೀನೇ ಮಾರ್ಗ ತೋರಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸುವುದಕ್ಕೆ ಪ್ರಪತ್ತಿಮಾರ್ಗವೆಂದು ಹೆಸರು; ಇದನ್ನೇ ಶರಣಾಗತಿಯೆಂದೂ ಹೇಳುವರು. ಈ ಮಾರ್ಗದಲ್ಲಿ ನಡೆಯುವವನೇ ಪ್ರಪನ್ನನು. ಶೇಷಿಯೆಂದರೆ ಪರಮಾತ್ಮನು, ಅವನಿಗೆ ಮುಖವಿಕಾಸವನ್ನುಂಟುಮಾಡುವುದು ತನಗೆ ಸ್ವರೂಪವೆಂದು ತಿಳಿದಿರುವ ಜೀವನನಿಗೆ ಶೇಷನೆಂದು ಹೆಸರು. ಈ ಜ್ಞಾನವೇ ಶೇಷತ್ವಜ್ಞಾನವೆನಿಸುವುದು.

೬. ಎರಡನೆಯ ಪ್ರೋಕ್ಷಣವು, ಇದರ ಮಂತ್ರ:—

**ದಧಿಕ್ರಾವ್ಣೋ ಅಕಾರಿಷಂ, ಜಿಷ್ಣೋರಶ್ವಸ್ಯ ವಾಜಿನಃ ಸುರಭಿನೋ ಮುಖಾಕರತ್ ಪ್ರಣ ಆಯೂಗ್ಂಷಿ ತಾರಿಷತ್ ಆಪೋಹಿಷ್ಠಾ ಮಯೋಭುವಃ..........ಜನಯಥಾ ಚನಃ.**

ಜಿಷ್ಣೋಃ—ಜಯಶೀಲನಾಗಿಯೂ, ಅಶ್ವಸ್ಯ-ಸರ್ವಲೋಕವ್ಯಾಪಿಯಾಗಿಯೂ, ವಾಜಿನಃ-ವೇಗವುಳ್ಳವನಾಗಿಯೂ ಇರುವ, ದಧಿಕ್ರಾವ್ಣಃ-ದಧಿಕ್ರಾವಾ ಎಂಬ ದೇವತೆಯನ್ನು, ಅಕಾರಿಷಂ-(ಸ್ತೋತ್ರ) ಮಾಡುವೆನು. (ಸಃ-ಆ ದಧಿಕ್ರಾವನು) ನಃ-ನಮ್ಮ, ಮುಖಾ-ಮೋರೆಗಳನ್ನು, ಸುರಭಿ-ವಾಸನೆಯುಳ್ಳದನ್ನಾಗಿ, ಶುದ್ಧವಾದುದನ್ನಾಗಿ ಕರತ್-ಮಾಡಲಿ; (ಪ್ರಣಆಯೂಂಷಿ, ಪ್ರ + ನಃ + ಆಯೂಗ್ಂಷಿ) ನಃ-ನಮ್ಮ, ಆಯೂಂಷಿ-ಆಯುಸ್ಸುಗಳನ್ನು, ಪ್ರತಾರಿಷತ್-ಬಹಳ

ಹೇಳಿದಂತೆ ಮಾಡಲಿ: [ಅಪವಿತ್ರಃ...ಬಾಹ್ಯಾಭ್ಯಂತರಃ ಶುಚಿಃ ಎಂಬ ಮಂತ್ರದ ಅರ್ಥವನ್ನೂ ವಿವರಣವನ್ನೂ ಹಿಂದೆಯೇ ಕೊಡಲಾಗಿದೆ.]

ಓಂ ತ್ರಿವಿಕ್ರಮಾಯ ನಮಃ ತ್ರಿವಿಕ್ರಮ-ಎಂದರೆ ಸಕಲಲೋಕಗಳನ್ನು ಆಳುವವನಾಗಿ, ಎಲ್ಲ ಜಗತ್ತುಗಳನ್ನೂ ಧರಿಸುವವನಾಗಿ ನಿಖಿಲಲೋಕಗಳನ್ನೂ ಅಳೆದ ತ್ರಿವಿಕ್ರಮನೆಂದು ಅರ್ಥವಾಗುವುದು. ಪಾಪಗಳನ್ನು ಸಂಹರಿಸುವುದರಿಂದ ಹರಿಯೆನಿಸುವನು; ಭಕ್ತರು ತನ್ನ ಮನಸ್ಸಿನಲ್ಲಿ ನೆನೆದ ಮಾತ್ರದಲ್ಲಿಯೇ ಸ್ವಪ್ನದಲ್ಲಿ ಬಂದು ಮಾತಾಡಿ ಅವರಿಗೆ ಒಲಿಯುವುದರಿಂದ ದೇವಶ್ರೇಷ್ಠನು. ಇಲ್ಲಿ ಈ ಮೂರು ಅರ್ಥವೂ ಮನಸ್ಸಿಗೆ ಅನುಸಂಧೇಯವು.

ಭಗವಂತನನ್ನು ಹೊಗಳಿ ಪ್ರಯೋಜನವನ್ನು ಪಡೆಯಬೇಕಾದರೆ ಆ ಫಲವನ್ನು ಬಯಸುವವನ ಮನಸ್ಸು ಎಲ್ಲಾಗಲೂ ಬಹಳ ಶುದ್ಧವಾಗಿರಬೇಕು. ಸಜ್ಜನನಿಗೆ ಭಗವಂತನ ಗುಣಗಳೇ ಮುಖ್ಯವಾದುದರಿಂದ ಆ ಗುಣಗಳನ್ನನುಸರಿಸುವುದಕ್ಕೆ ಆಯುಸ್ಸನ್ನೂ, ಶ್ರೇಯಸ್ಸಾಧನಗಳನ್ನಾತ ಬೇಡಿದಂತೆ, ಒದಗುವ ವಿಘ್ನಗಳ ಪರಿಹಾರವನ್ನೂ ಕೇಳಿ ಪಡೆಯಬೇಕೆಂದು ಹೇಳುವುದರಿಂದ ಅವನ ದೌರ್ಬಲ್ಯಕ್ಕೆ ಪಾಪದ ಬಗೆಯಿಂದಲೂ ಕೇಳಿರುವನು.

೬. ಮೂರು ಅರ್ಘ್ಯಗಳನ್ನು ಕೊಡುವುದು.

ಓಂಕಾರಸಹಿತವಾದ ಮೊದಲನೆಯ ಮೂರು ವ್ಯಾಹೃತಿಗಳೊಡನೆ ಗಾಯತ್ರೀಮಂತ್ರವನ್ನು ಜಪಿಸುತ್ತ ಸೂರ್ಯಾಭಿಮುಖನಾಗಿ ನಿಂತು ಆ ಮಂಡಲದೊಳಗಿರುವ ಪರಮಾತ್ಮನನ್ನು ನೆನೆಯುತ್ತ ಅರ್ಘ್ಯವನ್ನು ಕೊಡುವುದು.

೭. ಒಂದು ಪ್ರಾಣಾಯಾಮವು.

೮. ಒಂದು ಅರ್ಘ್ಯವನ್ನು ಕೊಡುವುದು.

ಕಾಲವು ಮೀರಿಹೋಗಿದ್ದರೆ ಆ ಕಾಲವಿಳಂಬದ ದೋಷವನ್ನು ಹೋಗಲಾಡಿಸುವುದಕ್ಕಾಗಿ ಮತ್ತೊಂದು ಅರ್ಘ್ಯವನ್ನು ಕೊಡುವುದು.

೧೦. **ಅಸಾವಾದಿತ್ಯೋ ಬ್ರಹ್ಮ** ಎಂದರೆ ಈ ಆದಿತ್ಯನು ಪರಬ್ರಹ್ಮನು, ಎಂಬ ಈ ಮಂತ್ರವನ್ನು ಪಠಿಸುತ್ತ ತನ್ಮಂತ್ರವಾಚ್ಯನಾದ ಭಗವಂತನನ್ನು ನೆನೆಯುತ್ತ ಒಂದಾವೃತ್ತಿ ತನ್ನನ್ನು ತಾನೇ ಪ್ರದಕ್ಷಿಣೆ ಮಾಡುವುದು. ಸೂರ್ಯಮಂಡಲದೊಳಗಿರುವ ಶ್ರೀಮನ್ನಾರಾಯಣನಿಗೆ ಆದಿತ್ಯನೆಂದು ಹೆಸರು.

೧೧. ಒಂದು ಆಚಮನವು.

೧೨. ಕೇಶವಾದಿದ್ವಾದಶತರ್ಪಣಂ.

**ಕೇಶವಂ ತರ್ಪಯಾಮಿ, ನಾರಾಯಣಂ ತರ್ಪಯಾಮಿ, ಮಾಧವಂ ತರ್ಪಯಾಮಿ, ಗೋವಿಂದಂ ತರ್ಪಯಾಮಿ. ವಿಷ್ಣುಂ ತರ್ಪಯಾಮಿ, ಮಧುಸೂದನಂ ತರ್ಪಯಾಮಿ, ತ್ರಿವಿಕ್ರಮಂ ತರ್ಪಯಾಮಿ, ವಾಮನಂ ತರ್ಪಯಾಮಿ, ಶ್ರೀಧರಂ ತರ್ಪಯಾಮಿ, ಹೃಷೀಕೇಶಂ ತರ್ಪಯಾಮಿ. ಪದ್ಮನಾಭಂ ತರ್ಪಯಾಮಿ. ದಾಮೋದರಂ ತರ್ಪಯಾಮಿ, ದಾಮೋದರಃ ಪ್ರೀಯತಾಂ.**

ಕೇಶವಂ ತರ್ಪಯಾಮಿ-ಕೇಶವನನ್ನು ತೃಪ್ತಿಗೊಳಿಸುವೆನು ಇತ್ಯಾದಿ. ದಾಮೋದರಃ ಪ್ರೀಯತಾಂ-ದಾಮೋದರನು ಪ್ರೀತಿಯುಳ್ಳವನಾಗಲಿ.

ಧನುರ್ಮಾಸವೇ ಮೊದಲಾದ ಹನ್ನೆರಡು ಮಾಸಗಳಿಗೆ ಕೇಶವಾದಿ ಮೂರ್ತಿಗಳು ಅಧಿಕಾರಿಗಳಾದುದರಿಂದ ಅವರಿಗೆ ತೃಪ್ತಿಯಾಗುವ ಸಲುವಾಗಿ ಈ ಹನ್ನೆರಡು ತರ್ಪಣಗಳನ್ನೂ ಮಾಡುವುದು.

೧೩. ಬಳಿಕ ಎರಡು ಆಚಮನಗಳನ್ನು ಮಾಡುವುದು.

೧೪. **ಶ್ರೀಭಗವತ್ಸಮಾರಾಧನಂ ಕರಿಷ್ಯೇ.** ಇದನ್ನು ಭಗವಂತನ ಆರಾಧನರೂಪವಾಗಿ ಮಾಡುವೆನು ಎಂದು ಒಂದಾವೃತ್ತಿ, ತರ್ಪಣಕ್ಕೆ ಬಿಡುವಂತೆಯೇ ನೀರನ್ನು ಬಿಟ್ಟು ಅನಂತರದಲ್ಲಿ,

೧೫. **ಓಂ ಭೂರ್ಭುವಸ್ಸುವಃ**

ಎಂದು ಹೇಳಿಕೊಂಡು ಜಪಮಾಡುವೆಡೆಯನ್ನು ಪ್ರೋಕ್ಷಿಸಿ ಮೂರು ಪ್ರಾಣಾಯಾಮಗಳನ್ನು ಮಾಡಿ.

೧೬. ಕರನ್ಯಾಸ. ಇದರ ಮಂತ್ರವು:—

**ಪ್ರಣವಸ್ಯ ಋಷಿರ್ಬ್ರಹ್ಮಾ ದೇವೀಗಾಯತ್ರೀಚ್ಛಂದಃ, ಪರಮಾತ್ಮಾ ಶ್ರೀಮನ್ನಾರಾಯಣೋದೇವತಾ.**

ಪ್ರಣವಸ್ಯ-ಓಂಕಾರಕ್ಕೆ, ಬ್ರಹ್ಮಾ-ಬ್ರಹ್ಮದೇವರು, ಋಷಿಃ-ಋಷಿಯು; ದೇವೀ-ದೇವತೆಯಾದ, ಗಾಯತ್ರೀ-ಗಾಯತ್ರಿಯು, ಛಂದಃ-ಛಂದಸ್ಸು; ಪರಮಾತ್ಮಾ ಶ್ರೀಮನ್ನಾರಾಯಣಃ-ಪರಮಾತ್ಮನಾದ ಶ್ರೀಮನ್ನಾರಾಯಣನೇ, ದೇವತಾ ದೇವತೆಯು.

ನ್ಯಾಸವೆಂದರೆ ಇಡುವುದು. ಇಲ್ಲಿ ಕೈಯನ್ನು ತಲೆ, ತುಟಿ, ಎದೆ ಇವುಗಳ ಮೇಲೆ ಇಡುವುದು. ಋಷಿಯ ಹೆಸರನ್ನು ಹೇಳುವಾಗ ತಲೆಯನ್ನೂ, ಛಂದಸ್ಸಿನ ಹೆಸರನ್ನು ಉಚ್ಚರಿಸುವಾಗ ಬಾಯನ್ನೂ, ದೇವತೆಯ ಹೆಸರನ್ನು ಹೇಳುವಾಗ ಎದೆಯನ್ನೂ ಕೈಯಿಂದ ಮುಟ್ಟ ಕರತಾಳವನ್ನು ಮಾಡುವುದು.

ಲೋಕೋಪಕಾರಕ್ಕೋಸುಗ ಈ ಮಂತ್ರವನ್ನು ಹೇಳಿದ ಋಷಿಯನ್ನು ತಾನು ಕೃತಜ್ಞತೆಯಿಂದ ವಂದಿಸುತ್ತಾನೆಂಬುದನ್ನು ತೋರಿಸಲು, ಆ ಋಷಿಯ ಹೆಸರು ಬಂದಾಗ ಕೈಯಿಂದ ತಲೆಯನ್ನು ಮುಟ್ಟಿಕೊಳ್ಳುವುದರ ಅಭಿಪ್ರಾಯ; ಆ ಋಷಿಯ ಬಾಯಿಂದ ಹೊರಬಂತೆಯೇ ತನ್ನ ಬಾಯಿಂದಲೂ ಆ ಮಂತ್ರವು ಉಚ್ಚರಿಸಲ್ಪಡಲು ಸೌಕರ್ಯವುಂಟಾಗಬೇಕೆಂಬ ಆಸೆಯಿಂದ ಬಾಯನ್ನು ಮುಟ್ಟಿಕೊಳ್ಳುವುದು. ತನ್ನ ಪ್ರಾರ್ಥನೆಯನ್ನು ಲಾಲಿಸಿ ಈ ಮಂತ್ರಕ್ಕೆ ಅಧಿಪತಿಯಾದ ದೇವತೆಯು ತನ್ನ ಹೃದಯದಲ್ಲಿ ನಿಲ್ಲಬೇಕೆಂಬ ಆಶಯವನ್ನು ಸೂಚಿಸುವುದಕ್ಕಾಗಿ ಎದೆಯನ್ನು ಮುಟ್ಟಿಕೊಳ್ಳುವುದು.

೧೭. ಹತ್ತು ಪ್ರಾಣಾಯಾಮಗಳು. (ಮೌನದಿಂದ ಜಪಮಾಡುವುದು.)

೧೮. ಒಂದು ಪ್ರಾಣಾಯಾಮವು.

೧೯. ಗಾಯತ್ರೀ ಆವಾಹನವು. ಇದರ ಮಂತ್ರ:—

**ಆಯಾತು ವರದಾದೇವೀ ಅಕ್ಷರಂ ಬ್ರಹ್ಮಸಮ್ಮಿತಂ; ಗಾಯತ್ರೀಂ ಛಂದಸಾಂ ಮಾತೇದಂ ಬ್ರಹ್ಮಜುಷಸ್ವನಃ;**

**ಓಜೋಽಸಿ ಸಹೋಽಸಿ ಬಲಮಸಿ ಭ್ರಾಜೋಽಸಿ ದೇವಾನಾಂ ಧಾಮನಾಮಾಸಿ ವಿಶ್ವಮಸಿ ವಿಶ್ವಾಯುಃ ಸರ್ವಮಸಿ ಸರ್ವಾಯುಃ ಅಭಿಭೂರೋಂ ಗಾಯತ್ರೀಮಾವಾಹಯಾಮಿ ಸಾವಿತ್ರೀಮಾವಾಹಯಾಮಿ ಸರಸ್ವತೀಮಾವಾಹಯಾಮಿ.**

ವರದಾ-ತನ್ನನ್ನು ಹೊಂದುವವರಿಗೆ ಇಷ್ಟಗಳೆಲ್ಲವನ್ನು ಕೊಡುವವಳಾದ, ಅಕ್ಷರಂ-ನಿತ್ಯಳಾದ, ಬ್ರಹ್ಮಸಮ್ಮಿತಂ-ವೇದ ಪ್ರಣವ ಅಥವ ಪರಬ್ರಹ್ಮಕ್ಕೆ ಸಮಾನೆಯಾದ, ಛಂದಸಾಂ ಮಾತಾ-ಎಲ್ಲ ಛಂದಸ್ಸುಗಳಿಗೂ ಮುಖ್ಯಳಾದ, ಗಾಯತ್ರೀಂ-ಗಾಯತ್ರೀ ಎಂಬ, ದೇವೀ-ದೇವತೆಯು, ಆಯಾತು-(ಇಲ್ಲಿಗೆ) ಬರಲಿ; ನಃ-ನಮ್ಮ, ಇದಂ ಬ್ರಹ್ಮ ಈ ಸ್ತೋತ್ರರೂಪವಾದ ವೇದವಾಕ್ಯವನ್ನು, ಜುಷಸ್ವ-ಅಂಗೀಕರಿಸು; ಓಜೋಽಸಿ-ನೀನು ಇಂದ್ರಿಯಗಳಿಗೆ ಶಕ್ತಿಯಾಗಿದ್ದೀಯೆ, ಸಹೋಽಸಿ-ವೇಗವಾದವಳಾಗಿದ್ದೀಯೆ, ಬಲಮಸಿ-ಶಕ್ತಿಯಾಗಿದ್ದೀಯೆ, ಭ್ರಾಜೋಽಸಿ-ಪ್ರಕಾಶವಾಗಿದ್ದೀಯೆ; ದೇವಾನಾಂ-ದೇವತೆಗಳ, ನಾಮ-ಹೆಸರುಗೊಂಡ, ಧಾಮಾಸಿ-ತೇಜಸ್ಸಾಗಿದ್ದೀಯೆ; ವಿಶ್ವಮಸಿ-ವಿಶ್ವವಿರುವಂತೆ ಎಲ್ಲವನ್ನೂ ಆಕ್ರಮಿಸಿದವಳಾಗಿರುವೆ; ವಿಶ್ವಾಯುಃ-ನಾಲ್ಕು ವಿಧವಾದ ಭೂತಗಳ ಆಯುಸ್ಸನ್ನು ಹೆಚ್ಚಿಸುವವಳಾಗಿದ್ದೀಯೆ; ಸರ್ವಮಸಿ-ನಿನ್ನನ್ನು ಪ್ರೀತಿಗೆಯ್ವ ವಸ್ತುಗಳನ್ನು ನಿರ್ಮಿಸುವವಳಾಗಿರುವೆ. ಸರ್ವಾಯುಃ-ಕಾಲವನ್ನು ಸ್ವವಶಕ್ಕೆ ಗೆಯ್ಯುವವಳಾಗಿರುವೆ, ಅಭಿಭೂಃ-ಸಕಲ ಪಾಪಗಳನ್ನು ಪರಿಹಾರಮಾಡುವವಳೂ ನೀನೇ, (ಇಂತಹ) ಗಾಯತ್ರೀಂ-ಗಾಯತ್ರಿಯನ್ನು, ಆವಾಹಯಾಮಿ-ಆವಾಹನೆಗೆಯ್ಯುವೆನು. ಸಾವಿತ್ರೀಮಾವಾಹಯಾಮಿ-ಸಾವಿತ್ರಿಯನ್ನು ಆವಾಹನೆ ಮಾಡುವೆನು, ಸರಸ್ವತೀಮಾವಾಹಯಾಮಿ-ಸರಸ್ವತಿಯನ್ನು ಆವಾಹನೆ ಮಾಡುವೆನು.

ಗಾಯತ್ರಿಯನ್ನು ಜಪಿಸುವುದಕ್ಕೆ ಮೊದಲೇ, ಜಪಮಾಡಬೇಕೆಂದಿರುವವನು ತನ್ನಂತರ್ಯಾಮಿಯಾದ ದೇವತೆಯನ್ನು "ನನ್ನ ಹೃದಯದೊಳಿದ್ದುಕೊಂಡು ನಾನು ಮಾಡುವ ಪ್ರಾರ್ಥನೆಯನ್ನು ನೀನು ಅಂಗೀಕರಿಸಬೇಕು" ಎಂದು ಬೇಡುತ್ತಾನೆ. ಗಾಯತ್ರಿಯಿಂದ ಪ್ರತಿಪಾದ್ಯನಾದವನು ಪರಮಾತ್ಮನು. ಆತನನು ಈ ಮಂತ್ರದ ಮೂಲಕವಾಗಿ

ಆ ಪರಮಾತ್ಮನ ಕಲ್ಯಾಣಗುಣಗಣವನ್ನು ಕೀರ್ತಿಸುತ್ತ, ತನ್ನ ಅನಿಷ್ಟವನ್ನು ಹೋಗಿಸಿ ಇಷ್ಟವನ್ನು ಕೊಟ್ಟು ಸಲಹಬೇಕೆಂದು ಬೇಡಿಕೊಳ್ಳುವನು. ಸಿದ್ಧನಾಗಿರುವ ತನ್ನ ಅಂತರಂಗದಲ್ಲಿ ಬಂದು ವಾಸಮಾಡುತ್ತಿರೆಂದು ಪರಮಾತ್ಮನನ್ನು ಕರೆಯುವುದಕ್ಕೆ ಆವಾಹನೆಯೆಂದು ಹೆಸರು.

ಗಾಯತ್ರಿಯು ಬ್ರಹ್ಮಸಮಾನವೆಂದು ಹೇಳಲ್ಪಟ್ಟಿದೆ. ಬ್ರಹ್ಮವೆಂದರೆ ವೇದವು, ಪ್ರಣವವು, ಮತ್ತು ಪರಬ್ರಹ್ಮವು. "ಎಲೈ ಗಾಯತ್ರಿಯೇ, ನೀನು ಎಲ್ಲರ ಇಷ್ಟವನ್ನು ಕೊಡುವವಳಾಗಿ ವೇದಕ್ಕೆ ಸಮನಾಗಿ ಇರುವೆ; ಓಂಕಾರದಂತೆ ಎಲ್ಲ ಹುರುಳನ್ನು ಸಂಗ್ರಹಿಸಿಕೊಂಡಿರುವೆ; ಎಲ್ಲ ಲೋಕಗಳಿಗೂ ಕಾರಣನಾದ ಭಗವಂತನೋಪಾದಿಯಲ್ಲಿ ಸಕಲವಾಕ್ಯಗಳಿಗೂ ಮೂಲವಾದ ವೇದಕ್ಕೆ ತಾಯಿಯಂತೆ ಇದ್ದೀಯೆ; ಇಂದ್ರಿಯವುಳ್ಳವರಲ್ಲಿ ಇರುವ ಶಕ್ತಿಯೂ ನೀನೇ; ವೇಗವುಳ್ಳವರಲ್ಲಿ ಇರುವ ವೇಗವೂ ನೀನೇ; ಬಲವುಳ್ಳವರ ಬಲವೂ ನೀನೇ; (ಬಲವೆಂದರೆ ಪಾಲಿಸುವ ಸಾಮರ್ಥ್ಯವು) ಪ್ರಕಾಶವುಳ್ಳವರ ಪ್ರಕಾಶವೂ ನೀನೇ; ಸಮಸ್ತದೇವತೆಗಳಿಗೂ ಮುಖ್ಯತೇಜಸ್ಸಾಗಿರುವವಳೂ ನೀನೇ; ವಿಷ್ಣುವಿನಂತೆ ಸರ್ವವನ್ನು ಆಕ್ರಮಿಸಿರುವವಳೂ ನೀನೇ; ನಾಲ್ಕುಬಗೆಯ ಭೂತಗಳ ಆಯುಸ್ಸನ್ನು ಹೆಚ್ಚುಗೊಳಿಸುವವಳಾಗಿ, ಎಲ್ಲವನ್ನೂ ನಿರ್ವಹಿಸುವವಳಾಗಿ, ಕಾಲವಿಶೇಷಗಳನ್ನು ವ್ಯವಸ್ಥೆಗೆಯ್ಯುವವಳಾಗಿ ಇರುವವಳೂ ನೀನೇ" ಎಂಬುದು ಗಾಯತ್ರೀಮಂತ್ರದ ಸಾರಾಂಶವು. ಇಂತಹ ಗುಣವಿಶಿಷ್ಟನಾದ ಪರಮಾತ್ಮನು ತನ್ನ ಸಮೀಪದಲ್ಲಿರುವಂತೆ ಭಾವಿಸಿಕೊಂಡು ಜಪವನ್ನು ಮಾಡಬೇಕು.

೨೦. ನ್ಯಾಸವು—ಜಪದಮಂತ್ರ.

**ಸಾವಿತ್ರ್ಯಾ ಋಷಿರ್ವಿಶ್ವಾಮಿತ್ರಃ ದೇವೀಗಾಯತ್ರೀ ಛಂದಃ ಪರಮಾತ್ಮಾ ಸವಿತಾ ದೇವತಾ.**

ಸಾವಿತ್ರಿಗೆ ವಿಶ್ವಾಮಿತ್ರನು ಋಷಿಯು, ಗಾಯತ್ರೀದೇವಿಯೇ ಛಂದಸ್ಸು, ಸವಿತೃಪರಮಾತ್ಮನೇ ದೇವತೆಯು.

ಸವಿತೃ ಶಬ್ದವು "ಷೂಙ್ ಪ್ರಾಣಿಗರ್ಭವಿಮೋಚನೇ" ಎಂಬ ಧಾತುವಿನಿಂದ ಹುಟ್ಟಿ ಸಮಸ್ತ ಪ್ರಾಣಿಗಳನ್ನು ಹುಟ್ಟಿಸುವ ಪರಮಾತ್ಮ-

ನನ್ನು ಹೇಳುವುದು. ಈ ಮಂತ್ರೋಚ್ಚಾರಣೆಯ ಕಾಲದಲ್ಲಿಯೂ ಪ್ರಣವದ ಮಂತ್ರವನ್ನು ಹೇಳುವಾಗ ಮಾಡಿದಂತೆಯೇ ತಲೆಯನ್ನೂ ಬಾಯನ್ನೂ ಎದೆಯನ್ನೂ ಕೈಯಿಂದ ಮುಟ್ಟಿ ಕರತಾಳವನ್ನು ಮಾಡಬೇಕು.

೨೭. ಶಕ್ತಿಯಾದ ೧೦೮ ಆವೃತ್ತಿಯಾಗಲಿ, ೨೮ ಆವೃತ್ತಿಯಾಗಲಿ ಗಾಯತ್ರಿಯನ್ನು ಮೌನದಿಂದ ಜಪಿಸಬೇಕು. (ಓಂಕಾರ ಸಮೇತವಾಗಿ ಮೊದಲು ಮೂರು ವ್ಯಾಹೃತಿಗಳೊಡನೆ ಗಾಯತ್ರಿಯನ್ನು ಜಪಮಾಡಬೇಕು.)

೨೮. ಜಪವಾದಮೇಲೆ ಮೂರು ಪ್ರಾಣಾಯಾಮಗಳನ್ನು ಮಾಡುವುದು.

೨೯. ಉಪಸ್ಥಾನವು.

**ಶ್ರೀಭಗವದಾಜ್ಞಯಾ ಭಗವತ್ಕೈಂಕರ್ಯರೂಪಂ ಪ್ರಾತಸ್ಸಂಧ್ಯೋಪಸ್ಥಾನಂ ಕರಿಷ್ಯೇ.**

ಶ್ರೀಮಂತನಾದ ಭಗವಂತನ ಅಪ್ಪಣೆಯ ಮೇರೆಗೆ ಬೆಳಗ್ಗೆ ಮಾಡುವ ಸಂಧ್ಯಾವಂದನೆಯ ಉಪಸ್ಥಾನವನ್ನು ಮಾಡುವೆನು.

ಜಪವನ್ನು ಮಾಡುವವನು ತನ್ನ ಸಮೀಪದಲ್ಲಿ ಉಪಾಸ್ಯ ದೇವತೆಯು ಇರುವಂತೆ ನೆನೆದುಕೊಂಡು ಆ ದೇವತೆಯ ಗುಣ ಕಥನವನ್ನು ಮಾಡುವುದಕ್ಕೆ ಉಪಸ್ಥಾನವೆಂದು ಹೆಸರು.

**ಉತ್ತಮೇ ಶಿಖರೇ ದೇವಿ ಭೂಮ್ಯಾಂ ಪರ್ವತಮೂರ್ಧನಿ ।**
**ಬ್ರಾಹ್ಮಣೇಭ್ಯೋಽಭ್ಯನುಜ್ಞಾನಂ ಗಚ್ಛ ದೇವಿ ಯಥಾ ಸುಖಂ ॥**
**ಮಿತ್ರಸ್ಯ ಚರ್ಷಣೀ ಧೃತಃ ಶ್ರವೋದೇವಸ್ಯ ಸಾನಸಿಂ, ಸತ್ಯಂ ಚಿತ್ರಶ್ರವಸ್ತಮಂ, ಮಿತ್ರೋಜನಾನ್ ಯಾತಯತಿ ಪ್ರಜಾನನ್ ಮಿತ್ರೋದಾಧಾರ ಪೃಥಿವೀಮುತ ದ್ಯಾಂ, ಮಿತ್ರಃಕೃಷ್ಟೀಃ ಅನಿಮಿಷಾಭಿಚಷ್ಟೇ ಸತ್ಯಾಯ ಹವ್ಯಂ ಘೃತವದ್ವಿಧೇಮ, ಪ್ರಸಮಿತ್ರ ಮರ್ತೋಅಸ್ತು ಪ್ರಯಸ್ವಾನ್ ಯಸ್ತ ಆದಿತ್ಯ ಶಿಕ್ಷತಿ ವ್ರತೇನ, ನಹನ್ಯತೇ ನಜೀಯತೇತ್ವೋತೋನೈನಮಂಹೋ ಅಶ್ನೋತ್ಯಂತಿತೋನದೂರಾತ್.**

ದೇವಿ-ಎಲ್ಲ ದೇವತೆಯೂ, ಬಾಹ್ಯ ಸೌಖ್ಯ-ಐಶ್ವರ್ಯಾದಿಗಳಿಗೋಸ್ಕರ, ಅನುಜ್ಞಾನಂ-ಅನುಗ್ರಹವನ್ನು ಮಾಡಿ, ಭೂಮ್ಯಾಂ-ಭೂಮಿಯಲ್ಲಿ, ಪರ್ವತಮೂರ್ಧನಿ ಪರ್ವತದ ಶಿರದಲ್ಲಿ, ಉತ್ತಮೇ ಶಿಖರೇ-ಶ್ರೇಷ್ಠವಾದ ಶಿಖರದಲ್ಲಿ, ಯಥಾಸುಖಂ-ಹೇಗೆ ಸುಖವಾಗಿರುವುದೋ ಹಾಗೆ, ಗಚ್ಛ-ಹೋಗು, ಹೇ-ಅಮ್ಮಾ ; ಜನ್ಮಾಂತರಕೃತ-ಪಾಪಗಳನ್ನು ನಾಶಿಸುವ, ದೇವಸ್ಯ-ದೇವತೆಯಾದ, ಮಿತ್ರಸ್ಯ-ಎಲ್ಲರನ್ನು ಪಾಲಿಸುವ ಭಗವಂತನ, ಸತ್ಯಂ-ಸರ್ವಾಗಲೂ ಅಳಿಯದ. ಸಾನಸಿಂ-ಚೆನ್ನಾಗಿ ಸೇವಿಸಲು ತಕ್ಕದಾದ, ಚಿತ್ರಶ್ರವಸ್ತಮಂ-ಬಹು ಆಶ್ಚರ್ಯಕರವಾದುದರಿಂದ ಕೇಳತಕ್ಕದಾದ, ದ್ಯುಮ್ನಂ-ಯಶಸ್ಸನ್ನು, (ಸ್ತೌಮಿ-ಹೊಗಳುವೆನು) ಮಿತ್ರಃ-ಈ ಮಿತ್ರನು, ಬ್ರುವಾಣಃ-ಅವರವರ ಕರ್ಮಾದಿಗಳನ್ನು ತಿಳಿದವನಾಗಿ, ಜನಾನ್-ಜನರನ್ನು, ಯಾತಯತಿ-ಅವರಾ ಕರ್ಮಕ್ಕೆ ತಕ್ಕಂತೆ ನಡೆಯಿಸುವನು, ಮಿತ್ರಃ-ಮಿತ್ರನು, ಪೃಥಿವೀಂ-ಭೂಮಿಯನ್ನೂ ಉತ-ಮತ್ತು, ದ್ಯಾಂ-ಸ್ವರ್ಗವನ್ನೂ, ದಾಧಾರ-ಧರಿಸಿದನು, ಪಾಲಿಸಿದನು, ಮಿತ್ರಃ-ಮಿತ್ರನು, ಕೃಷ್ಟೀಃ-ಜನರನ್ನು, ಅನಿಮಿಷಾ-ಎವೆಯಿಕ್ಕದವನಾಗಿ, ಅಭಿಚಷ್ಟೇ-ನೋಡುತ್ತಾನೆ, ಪ್ರಕಾಶಿಸುವಂತೆ ಮಾಡುತ್ತಾನೆ. ಘೃತವತ್-ತುಪ್ಪದಿಂದ ಕೂಡಿದ, ಹವ್ಯಂ-ಅನ್ನವನ್ನು, ಸತ್ಯಾಯ-ಅವಿಕಾರನಾದ ಭಗವಂತನಿಗಾಗಿ. ವಿಧೇಮ-ನೀಡುವೆವು ; ಮಿತ್ರ ಆದಿತ್ಯ-ಎಲ್ಲ ಕಾರಣವಸ್ತುವಾದ ಮಿತ್ರನೇ, ಯಃ-ಯಾವನೊಬ್ಬನು, ವ್ರತೇನ-ನಿಯಮದೊಡನೆ, ತೇ (ತೇ)-ನಿನಗೆ, ಶಿಕ್ಷತಿ (ಅನ್ನಾದಿಗಳಿಂದ) ಉಪಚರಿಸುವನೋ, ಮರ್ತಃ-(ಮರ್ತ್ಯಃ)-ಮನುಷ್ಯನಾದ, ಸಃ-ಆತನು, ಪ್ರ-ಹೆಚ್ಚಾದ, ಪ್ರಯಸ್ವಾನ್-ಅನ್ನಾದಿ ಸಂಪದದಿಂದ ಕೂಡಿದವನಾಗಿ, ಅಸ್ತು-ಆಗಲಿ ; ತ್ವೋತಃ (ತ್ವಾ — ಊತಃ)-ನಿನ್ನಿಂದ ಪಾಲಿಸಲ್ಪಟ್ಟ ಆತನು, ನಹನ್ಯತೇ-ರೋಗಾದಿಗಳಿಂದ ಕೊಲ್ಲಲ್ಪಡುವನಲ್ಲ ; ನಜೀಯತೇ-ಹಗೆಗಳಿಂದ ಗೆಲ್ಲಲ್ಪಡನು ; ಏನಂ-ನಿನ್ನಿಂದ ಕಾಪಿಡಲ್ಪಟ್ಟ ಇವನನ್ನು. ಅಂಹಃ-(ಅಂಹಸ್) ಪಾಪವು, ಅಂತಿತಃ-ಸಮೀಪದಲ್ಲಿಯಾಗಲಿ, ದೂರಾತ್ ದೂರದಲ್ಲಿಯಾಗಲಿ, ನಾಶ್ನೋತಿ-ಹಿಡಿಯುವುದಿಲ್ಲ.

ಈ ಮಂತ್ರದಲ್ಲಿ ಜೀವನನು ಕರಣತ್ರಯದಿಂದಲೂ ಪರಮಾತ್ಮ

ನನ್ನು ಸೇವಿಸುತ್ತಾನೆ. ಭಗವಂತನ ಅತ್ಯದ್ಭುತವಾದ ಕೀರ್ತಿಯನ್ನು ಭಕ್ತಿಯೊಡನೆ ಕೇಳುವುದರಿಂದ ವಾಚಿಕವ್ಯಾಪಾರವನ್ನು ಹೇಳಿದಂತಾಯಿತು. ಭಗವಂತನು ವೈಷಮ್ಯವೂ ನೈರ್ಘೃಣ್ಯವೂ ಇಲ್ಲದಂತೆ ಜಗದ್ವ್ಯಾಪಾರ ಕಾರ್ಯಗಳನ್ನು ನಡೆಯಿಸುವುದು, ಎಲ್ಲ ಪ್ರಾಣಿಗಳನ್ನೂ ಕಣ್ಣು ಮುಚ್ಚದೆ ನೋಡುತ್ತಿರುವುದು, ಇವೇ ಮೊದಲಾದ ಅವನ ಚಿಹ್ನೆಗಳನ್ನು ಮನದಲ್ಲಿ ನೆನೆವುದರಿಂದ ಮಾನಸಿಕವ್ಯಾಪಾರವು ಹೇಳಲ್ಪಟ್ಟಿತು. ಭಗವಂತನನ್ನು ವ್ರತದೊಡನೆ ಅನ್ನಾದಿಗಳಿಂದ ಉಪಚರಿಸುವುದರಿಂದ ಕಾಯಿಕವ್ಯಾಪಾರವು ಹೇಳಲ್ಪಟ್ಟಿತು. ಈ ರೀತಿಯಲ್ಲಿ ಪರಮಾತ್ಮನ ಸೇವೆಯಲ್ಲಿ ಆಸಕ್ತನಾಗಿರುವವನನ್ನು ರೋಗಾದಿಗಳು ಪೀಡಿಸಲಾರವು; ಹಗೆಗಳು ಜಯಿಸಲಾರರು.

ಜಗದೀಶ್ವರನ ಪೂಜೆಗಳನ್ನು ಮನೋವಾಕ್ಕಾಯಗಳಿಂದ ಮಾಡುತ್ತ, ಅವನಿಗೆ ನಿವೇದನೆಯನ್ನು ಮಾಡದೆ ತಾನು ಊಟಮಾಡುವುದಿಲ್ಲವೆಂಬ ನಿಯಮದೊಡನೆ ಇರುವ ಚೇತನನನ್ನು ಪರಮಾತ್ಮನು ಹುಟ್ಟು ಅಳಿವು ಇಲ್ಲದ ಜ್ಞಾನದಿಂದ ಪ್ರಕಾಶಿಸುವಂತೆ ಮಾಡುವುದಲ್ಲದೆ, ಸ್ವಾನುಭವವೆಂಬ ಪ್ರತ್ಯಕ್ಷಜ್ಞಾನವನ್ನೂ ಕರುಣಿಸುವನೆಂಬುದೇ ಮುಖ್ಯತಾತ್ಪರ್ಯವು. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವೆಂಬ ಮೂರು ಬಗೆಯಾದ ದುಃಖಗಳೂ ಇವನನ್ನು ಅಂಟಲಾರವು. ಈ ಜನ್ಮದ ಪಾಪಗಳಾಗಲಿ, ಹಿಂದಣ ಜನ್ಮದ ಪಾಪಗಳಾಗಲಿ ಇವನನ್ನು ಬಾಧಿಸಲಾರವು. ಭಗವಂತನ ಮಹಾತ್ಮ್ಯವು ಎಂತಹುದೋ! ಇಲ್ಲಿ * “ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ” ಎಂಬ ಭಗವಂತನ ವಾಕ್ಯವು ನೆನಪಿಗೆ ಬರುವುದು. “ ಅದ-ಭಕ್ಷಣೇ ” ಎಂಬ ಧಾತುವಿನಿಂದ ಹುಟ್ಟಿದ ಅದಿತ್ಯ ಶಬ್ದವು ಪ್ರಳಯಕಾಲದಲ್ಲಿ ಸಮಸ್ತಪ್ರಾಣಿ

---

* ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ. ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ.
ಸಕಲವಾದ ಧರ್ಮಗಳನ್ನೂ ಬಿಟ್ಟು ನನ್ನನ್ನೇ ಶರಣುಹೊಂದಿದರೆ ನಾನು ನಿನ್ನ ಪಾಪಗಳೆಲ್ಲದರಿಂದಲೂ ಬಿಡಿಸುವೆನು; ನೀನು ದುಃಖಪಡಬೇಡ.

ಗಳನ್ನೂ ತನ್ನ ಒಳಗಿಟ್ಟುಕೊಂಡು ಪ್ರೇರಿಸುವ ಪರಮಾತ್ಮನನ್ನು ಹೇಳುವುದು.

೨೫. ದೇವತಾದ್ಯರಿಗೆ ವಂದನೆಯು.

**ಸಂಧ್ಯಾಯೈ ನಮಃ**, ಎಂದು ಪೂರ್ವದಿಕ್ಕಿಗೆ;

**ಗಾಯತ್ರ್ಯೈ ನಮಃ**, ಎಂದು ದಕ್ಷಿಣದಿಕ್ಕಿಗೆ;

**ಸಾವಿತ್ರ್ಯೈ ನಮಃ**, ಎಂದು ಪಶ್ಚಿಮಕ್ಕೂ;

**ಸರಸ್ವತ್ಯೈ ನಮಃ**, ಎಂದು ಉತ್ತರಕ್ಕೂ ನಮಸ್ಕಾರಮಾಡುವುದು.

**ಸರ್ವಾಭ್ಯೋದೇವತಾಭ್ಯೋನಮೋನಮಃ**-ಎಲ್ಲಾ ದೇವತೆಗಳಿಗೂ ನಮಸ್ಕಾರವು.

**ಕಾಮೋಽಕಾರ್ಷೀತ್-ಮನ್ಯುರಕಾರ್ಷೀತ್-ನಮೋನಮಃ**-ಕಾಮವು ಮಾಡಿತು; ಕೋಪವು ಮಾಡಿತು; ಇದಕ್ಕಾಗಿ ನಮಸ್ಕಾರವು. ನಮಸ್ಕಾರವು. ಆಶೆಗೂ ಕೋಪಕ್ಕೂ ವಶನಾದುದರಿಂದ ನಾನು ಪಾಪಕ್ಕೆ ಗುರಿಯಾದೆನೆಂದು ಪಶ್ಚಾತ್ತಾಪಪಟ್ಟುಕೊಂಡು ಭಗವಂತನನ್ನು ನೆನೆಯುತ್ತ ಚೇತನನು ಮರಳಿಮರಳಿ ಪರಮಾತ್ಮನಿಗೆ ವಂದನೆಯನ್ನು ಮಾಡುವನು.

೨೬. ಹಿಂದಾವೃತ್ತಿ ಅಭಿವಾದನವನ್ನು ಮಾಡುವುದು. ಇದರ ಮಂತ್ರ :—

**ಅಭಿವಾದಯೇ .... ತ್ರ್ಯಾರ್ಷೇಯ ಪ್ರವರಾನ್ವಿತ.... ಗೋತ್ರಃ ....ಸೂತ್ರಃ.... ಶಾಖಾಧ್ಯಾಯೀ.... ಶರ್ಮನಾಮಾಹಂ ಅಸ್ಮಿಭೋಃ.**

ಇಂತಹ ಮೂರು ಋಷಿಗಳ ಸಂತತಿಗೆ ಸೇರಿದ, ಇಂತಹ ಋಷಿಯ ವಂಶದಲ್ಲಿ ಹುಟ್ಟಿದ, ಇಂತಹ ಋಷಿಯ ಕಟ್ಟಳೆಗೆ ಒಳಪಟ್ಟ, ಇಂತಹ ಶಾಖಾಧ್ಯಾಯಿಯಾದ, ಇಂತಹ ಹೆಸರುಳ್ಳ ನಾನು ನಮಸ್ಕರಿಸುವೆನು.

ಆಭಿಮುಖ್ಯಕ್ಕೋಸುಗ ನಾಮೋಚ್ಚಾರಣಾಪೂರ್ವಕವಾಗಿ ನಮಸ್ಕಾರವನ್ನು ಮಾಡುವುದಕ್ಕೆ ಅಭಿವಾದನೆಯೆಂದು ಹೆಸರು. ಮೊದಲು ತನ್ನ ವಂಶಕ್ಕೆ ಸೇರಿದ ಮೂರು ಋಷಿಗಳ ಹೆಸರನ್ನೂ, ತದನಂತರ ತನ್ನ ಗೋತ್ರದ ಋಷಿಯ ಹೆಸರನ್ನೂ, ಬಳಿಕ ತಾನು ಆಚರಿಸುವ

ಧರ್ಮಶಾಸ್ತ್ರಕರ್ತನಾದ ಋಷಿಯ ಹೆಸರನ್ನು, ತಾನು ಅಧ್ಯಯನ ಮಾಡುವ ವೇದಶಾಖೆಯ ಹೆಸರನ್ನೂ, ತನ್ನ ಹೆಸರನ್ನೂ ಹೇಳಬೇಕು. ಇವೆಲ್ಲವೂ ಅಧಿಕಾರಿಯ ಸಂಬಂಧಗಳನ್ನು ತಿಳಿಸುವುದಕ್ಕೆ ಕುರುಹು.

ಉಪಾಸ್ಯದೇವತೆಯಾದ ಭಗವಂತನನ್ನು ತನಗೆ ಅಭಿಮುಖನನ್ನಾಗುವಂತೆ ಮಾಡುವುದಕ್ಕೋಸುಗ ಅಧಿಕಾರಿಯು ತನ್ನ ನಾಮೋಚ್ಚಾರಣಾಪೂರ್ವಕವಾಗಿ ಈ ಮೂಲಕ ಪರಮಾತ್ಮನಿಗೆ ವಂದನೆಯನ್ನು ಮಾಡುತ್ತಾನೆ.

೨೭. ದಿಕ್ಕುಗಳಿಗೆ ಅಂಜಲಿಬದ್ಧನಾಗಿ ಮಾಡುವ ನಮಸ್ಕಾರವು

**ಪ್ರಾಚ್ಯೈ ದಿಶೇ ನಮಃ**-ಎಂದು ಪೂರ್ವದಿಕ್ಕಿಗೂ,
**ದಕ್ಷಿಣಾಯೈ ದಿಶೇ ನಮಃ**-ಎಂದು ದಕ್ಷಿಣದಿಕ್ಕಿಗೂ,
**ಪ್ರತೀಚ್ಯೈ ದಿಶೇ ನಮಃ**-ಎಂದು ಪಶ್ಚಿಮದಿಕ್ಕಿಗೂ,
**ಉದೀಚ್ಯೈ ದಿಶೇ ನಮಃ**-ಎಂದು ಉತ್ತರದಿಕ್ಕಿಗೂ, ನಮಸ್ಕಾರ;
**ಊರ್ಧ್ವಾಯ ನಮಃ**-ಮೇಲುಗಡೆಗೆ ನಮಸ್ಕಾರವು;
**ಅಧರಾಯ ನಮಃ**-ಕೆಳಗಡೆಗೆ ನಮಸ್ಕಾರವು;
**ಅಂತರಿಕ್ಷಾಯ ನಮಃ**-ಆಕಾಶಕ್ಕೆ ನಮಸ್ಕಾರವು;
**ಭೂಮ್ಯೈ ನಮಃ**-ಭೂಮಿಗೆ ನಮಸ್ಕಾರವು;

**ಬ್ರಹ್ಮಣೇ ನಮಃ**-ಪರಬ್ರಹ್ಮಕ್ಕೆ ನಮಸ್ಕಾರವು, ಎಂದು ದಿಗಾದಿಗಳಿಗೆ ವಂದನೆ ಮಾಡುವುದರಿಂದ ಸರ್ವವ್ಯಾಪಿಯಾದ ಪರಮಾತ್ಮನಿಗೆ ನಮಸ್ಕಾರವಾಗುವುದೆಂದು ಅಭಿಪ್ರಾಯವು.

೨೮. ತರುವಾಯ.

**ಆಕಾಶಾತ್ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ।**
**ಸರ್ವದೇವನಮಸ್ಕಾರಃ ಕೇಶವಂ ಪ್ರತಿ ಗಚ್ಛತಿ.**

ಆಕಾಶದಿಂದ ನೆಲಕ್ಕೆ ಬಿದ್ದ ನೀರೆಲ್ಲವೂ ಹೇಗೆ ಕಡಲನ್ನು ಸೇರುವುದೋ, ಹಾಗೆಯೇ ಎಲ್ಲ ದೇವತೆಗಳಿಗಾಗಿ ಮಾಡಿದ ವಂದನೆಗಳೂ ಕೇಶವನನ್ನು ಕುರಿತು ಹೋಗುತ್ತವೆ.

**ಕೇಶವಂ ಪ್ರತಿಗಚ್ಛತಿ ಓಂನಮೋನಮಃ-ನಮಸ್ಸವಿತ್ರೇ ಜಗದೇಕಚಕ್ಷುಷೇ ಜಗತ್ಪ್ರಸೂತಿಸ್ಥಿತಿನಾಶಹೇತವೇ। ತ್ರಯೀಮ**

**ಮಯಾಯ ತ್ರಿಗುಣಾತ್ಮಧಾರಿಣೇ ವಿರಿಂಚಿನಾರಾಯಣಶಂಕರಾತ್ಮನೇ.**

ಎಲ್ಲರಿಗೂ ಒಳ್ಳೆಯದನ್ನು ಮಾಡುವವನೇ, ಲೋಕಗಳಿಗೆಲ್ಲಾ ಒಂದೇ ತೇಜೋರೂಪಿಯಾಗಿರುವವನೇ, ಜಗತ್ತುಗಳ ಹುಟ್ಟು, ಇರವು ಅಳಿವು ಇವುಗಳಿಗೆ ಕಾರಣನಾದವನೇ, ವೇದಮಯನಾದವನೇ, ಮೂರು ಗುಣಗಳಿಂದ ಕೂಡಿದ ರೂಪಗಳನ್ನು ಧರಿಸಿಕೊಂಡಿರುವವನೇ, ಬ್ರಹ್ಮ ವಿಷ್ಣುಮಹೇಶ್ವರಸ್ವರೂಪಿಯೂ, ಎಲೈ ಸೂರ್ಯನೇ, ನಿನಗೆ ನಮಸ್ಕಾರವು.

**ಧ್ಯೇಯಸ್ಸದಾ ಸವಿತೃಮಂಡಲಮಧ್ಯವರ್ತೀ ನಾರಾಯಣ**
**ಸ್ಸರಸಿಜಾಸನಸನ್ನಿವಿಷ್ಟಃ । ಕೇಯೂರವಾನ್ ಮಕರಕುಂಡಲವಾನ್**
**ಕಿರೀಟೀ ಹಾರೀ ಹಿರಣ್ಮಯವಪುಃ ಧೃತಶಂಖಚಕ್ರಃ.**

ಸೂರ್ಯಮಂಡಲದ ನಡುಗಡೆಯಲ್ಲಿರುವ ತಾವರೆಯ ಆಸನದಲ್ಲಿ ಚೆನ್ನಾಗಿ ಕುಳಿತುಕೊಂಡಿರುವ, ತೋಳು ಬಳೆಗಳು ಮಕರಕುಂಡಲಗಳು ಕಿರೀಟಹಾರಗಳೊಡನೆ ಕೂಡಿಕೊಂಡಿರುವ, ಸ್ವರ್ಣಮಯವಾದ ದೇಹವುಳ್ಳ, ಶಂಖಚಕ್ರಗಳನ್ನು ಧರಿಸಿದವನಾಗಿರುವ ಶ್ರೀಮನ್ನಾರಾಯಣನೇ ಯಾವಾಗಲೂ ಚೆನ್ನಾಗಿ ಧ್ಯಾನಿಸಲ್ಪಡತಕ್ಕವನು.

**ಶಂಖಚಕ್ರಗದಾಪಾಣೇ ದ್ವಾರಕಾನಿಲಯಾಚ್ಯುತ ।**
**ಗೋವಿಂದ ಪುಂಡರೀಕಾಕ್ಷ ರಕ್ಷ ಮಾಂ ಶರಣಾಗತಂ ॥**

ತನ್ನನ್ನು ಆಶ್ರಯಮಾಡಿದವರ ಹಗೆಗಳನ್ನು ಧ್ವಂಸಮಾಡಲೋಸುಗವೇ ಯಾವಾಗಲೂ ಶಂಖಚಕ್ರಗದೆಗಳನ್ನು ಕೈಗಳಲ್ಲಿ ಹಿಡಿದುಕೊಂಡಿರುವ, ಪರಮಪದದಲ್ಲಿ ಇದ್ದರೆ ಆಶ್ರಿತರನ್ನು ರಕ್ಷಿಸುವುದಕ್ಕೆ ಸಾಧಕವಾಗಲಾರದೆಂದು ನೆನೆದು, ಶ್ರೀಮದ್ದ್ವಾರಕಾಪಟ್ಟಣದಲ್ಲಿ ವಾಸಮಾಡುವ, ಆಶ್ರಿತರನ್ನು ಕೈಬಿಡದಿರುವ, ಹಸುಗಳಂತೆ ಅಜ್ಞಾನಿಗಳಾದವರನ್ನು ಕಾಪಾಡುವ, ವೇದದಲ್ಲಿ ಹೇಳಿರುವ ಪರಬ್ರಹ್ಮಲಕ್ಷಣಕ್ಕೆ ತಕ್ಕುದಾದ, ತಾವರೆಯಂತಿರುವ ಕಣ್ಣುಗಳುಳ್ಳ ದೇವನೇ, ನಿನ್ನನ್ನು ಮರೆಹೊಕ್ಕಿರುವ ನನ್ನನ್ನು ಕಾಪಾಡು.

೨೯. ಒಮ್ಮೆ ಅಭಿವಾದನವನ್ನು ಮಾಡಬೇಕು.

೩೦. ಆಚಮನಗಳೆರಡನ್ನು ಮಾಡಿ ಈ ಶ್ಲೋಕವನ್ನು ಹೇಳುವುದು.

೩೧. **ಶ್ರೀರಂಗಮಂಗಳಮಣಿಂ ಕರುಣಾನಿವಾಸಂ ಶ್ರೀವೇಂಕಟಾದ್ರಿಶಿಖರಾಲಯಕಾಲಮೇಘಂ ॥ ಶ್ರೀಹಸ್ತಿಶೈಲಶಿಖರೋಜ್ಜ್ವಲಪಾರಿಜಾತಂ ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಂ.**

ಶ್ರೀರಂಗಕ್ಷೇತ್ರಕ್ಕೆ ಮಂಗಳರತ್ನವಾದ, ಮರುಕಕ್ಕೆ ತೌರುಮನೆಯಾದ ಶ್ರೀರಂಗನಾಥನನ್ನು, ಶ್ರೀವೇಂಕಟಪರ್ವತದ ಶಿಖರದಲ್ಲಿ ಕಪ್ಪು ಮೋಡದಂತಿರುವ ಶ್ರೀನಿವಾಸದೇವರನ್ನು, ಶ್ರೀಹಸ್ತಿಗಿರಿಯ ಶಿಖರದಲ್ಲಿ ಚೆನ್ನಾಗಿ ಹೊಳೆಯುವ ಕಲ್ಪವೃಕ್ಷದಂತಿರುವ ಕಾಂಚೀಪಟ್ಟಣದ ವರದರಾಜಸ್ವಾಮಿಯನ್ನು, ಯದುಗಿರಿಗೆ ದೀಪದಂತಿರುವ ಶ್ರೀನಾರಾಯಣಸ್ವಾಮಿಯನ್ನೂ ತಲೆಬಾಗಿ ನಮಿಸುವೆನು.

ಬಳಿಕ ಮನೆದೇವರಿಗೂ ಗುರುಹಿರಿಯರಿಗೂ ವಂದನೆಮಾಡುವುದು.

## ಪ್ರಾತಸ್ಸಂಧ್ಯಾವಂದನಂ ಸಂಪೂರ್ಣಂ

---

# ಸಾಯಂ ಸಂಧ್ಯಾವಂದನೆಯು.

ಇದನ್ನು ಪಶ್ಚಿಮಾಭಿಮುಖನಾಗಿಯಾಗಲಿ, ಉತ್ತರಾಭಿಮುಖನಾಗಿಯಾಗಲಿ ಮಾಡತಕ್ಕದ್ದು.

(ಪ್ರಾತಸ್ಸಂಧ್ಯಾವಂದನೆಗೂ ಇದಕ್ಕೂ ಇರುವ ವ್ಯತ್ಯಾಸಗಳು ಮಾತ್ರ ತೋರಿಸಲ್ಪಟ್ಟಿವೆ)

೩. ಸಂಕಲ್ಪವು.

**ಶ್ರೀಭಗವದಾಜ್ಞಯಾ.... ಸಾಯಂಸಂಧ್ಯಾವಂದನಂಕರಿಷ್ಯೇ.**

೫. ಆಪೋಶನವು.

**ಅಗ್ನಿಶ್ಚ ಮಾಮನ್ಯುಶ್ಚ .... ಯದಹ್ನಾಪಾಪಮಕಾರಿಷಂ ಅಹಸ್ತದವಲುಂಪತು; ಸತ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ.**

ಅಗ್ನಿಶ್ಚ-ಬೆಂಕಿಯು .... ಅಹ್ನಾ-ಹಗಲಿನಲ್ಲಿ, ಅಹಃ-ಅಹಶ್ಶಬ್ದವಾಚ್ಯನಾದ ಭಗವಂತನು .... ಸತ್ಯೇ-ಸತ್ಯರೂಪನಾದ .... (ಮಿಕ್ಕವುಗಳೆಲ್ಲವೂ "ಸೂರ್ಯಶ್ಚ ಮಾಮನ್ಯುಶ್ಚ" ಎಂಬ ಅನುವಾಕದಲ್ಲಿರುವಂತೆಯೇ).

"ಅಗ್ರಂ ನಯತೀತ್ಯಗ್ನಿಃ" ಎಂದರೆ ಯಾವನು ಮುಖ್ಯಸ್ಥಾನವನ್ನು ಹೊಂದಿಸುವನೋ ಆತನಿಗೆ ಅಗ್ನಿಯೆಂದು ಹೆಸರು. ಅಗ್ನಿಶಬ್ದವು ಪರಮಾತ್ಮವಾಚಕವು. "ನಹೀನಃ ಅಸ್ಯ ಇತಿ ಅಹಃ" ಯಾವನೊಬ್ಬನು ಯಾವನನ್ನಾಗಲಿ ಹೀನನಾದವನೆಂದು ತ್ಯಜಿಸದಿರುವನೋ ಆತನಿಗೆ ಅಹಸ್ ಎಂದು ಹೆಸರು. ಇದೂ ಪರಮಾತ್ಮವಾಚಕವಾದುದು. "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂದು ಹೇಳುವ ಶ್ರುತಿಯಂತೆ ಸತ್ಯಶಬ್ದಕ್ಕೆ ಪರಮಾತ್ಮನೆಂಬ ಹೆಸರು.

(ಆಮೇಲೆ ಮಿಕ್ಕವೆಲ್ಲವನ್ನೂ ಪ್ರಾತಸ್ಸಂಧ್ಯಾವಂದನೆಯ ಕಾಲದಲ್ಲಿ ಮಾಡಿದಂತೆಯೇ ಮಾಡಿ ಜಪವನ್ನು ಪೂರೈಸಿ)

೨೫. ಉಪಸ್ಥಾನವು.

ಶ್ರೀಭಗವದಾಜ್ಞಯಾ ........ ಸಾಯಂಸಂಧ್ಯೋಪಸ್ಥಾನಂ ಕರಿಷ್ಯೇ ಎಂದು ಹೇಳಿ ಪಶ್ಚಿಮಾಭಿಮುಖನಾಗಿ ನಿಂತು ಕೈಗಳನ್ನು ಮುಗಿದುಕೊಂಡು,

**ಉತ್ತಮೇ ಶಿಖರೇ......ಯಥಾಸುಖಂ.**

**ಇಮಂ ಮೇ ವರುಣ ಶ್ರುಧೀಹವಮದ್ಯಾಚಮೃಡಯ; ತ್ವಾಮವಸ್ಯುರಾಚಕೇ; ತತ್ವಾಯಾಮಿ ಬ್ರಹ್ಮಣಾ ವಂದಮಾನಃ ತದಾಶಾಸ್ತೇ ಯಜಮಾನೋಹವಿರ್ಭಿಃ; ಅಹೇಡಮಾನೋ ವರುಣೇಹಬೋಧ್ಯುರುಶಗ್ಂಸಮಾನಃ ಆಯುಃಪ್ರಮೋಷೀಃ; ಯಚ್ಚಿದ್ಧಿತೇ ವಿಶೋಯಥಾ ಪ್ರದೇವ ವರುಣ ವ್ರತಂ; ಮಿನೀಮಸಿ ದ್ಯವಿದ್ಯವಿ; ಯತ್ಕಿಂಚೇದಂ ವರುಣ ದೈವ್ಯೇ ಜನೇಭಿದ್ರೋಹಂ ಮನುಷ್ಯಾಶ್ಚರಾಮಸಿ; ಅಚಿತ್ತೀಯತ್ತವಧರ್ಮಾ ಯುಯೋಪಿಮಮಾನಸ್ತಸ್ಮಾದೇನಸೋದೇವ ರೀರಿಷಃ; ಕಿತವಾಸೋಯದ್ರಿರಿಪುರ್ನದೀವಿ ಯದ್ವಾಘಾಸತ್ಯಮುತಯನ್ನವಿದ್ಮ; ಸರ್ವಾತಾವಿಷ್ಯ ಶಿಥಿರೇವ ದೇವಾಥಾತೇಸ್ಯಾಮ ವರುಣ ಪ್ರಿಯಾಸಃ.**

ಹೇ ವರುಣ-ಎಲೈ ವರುಣರೂಪಪರಮಾತ್ಮನೇ, ಮೇ-ನನ್ನ, ಇಮಂ-ಈ, ಹವಂ-ಪ್ರಾರ್ಥನೆಯನ್ನು, ಶ್ರುಧಿ-ಕೇಳು, ಅದ್ಯಾಚ-ಈಗಲೇ, ಮೃಡಯ-ನನ್ನನ್ನು ಸುಖಿಯಾಗುವಂತೆ ಮಾಡು, ಅವಸ್ಯುಃ-ನನ್ನ ಪಾಲನೆಯನ್ನು ಬಯಸಿದವನಾಗಿ, ತ್ವಾಂ-ನಿನ್ನ, ಆಚಕೇ-ತೃಪ್ತಿಯನ್ನು ಬೇಡುವೆನು, ತತ್-ಆ, ತ್ವಾ-ನಿನ್ನನ್ನು, ಬ್ರಹ್ಮಣಾ-ವೇದದಿಂದ, ವಂದಮಾನಃ-ನಮಸ್ಕರಿಸುವವನಾಗಿ, ಯಾಮಿ-ಶರಣುಹೊಂದುವೆನು; ಯಜಮಾನಃ-ಯಾಗಮಾಡುವವನು, ಹವಿರ್ಭಿಃ-ಪುರೋಡಾಶ ಮೊದಲಾದವುಗಳಿಂದ, ತತ್-ಮೇಲೆ ಹೇಳಿದ ಸುಖರೂಪವಾದ ಫಲವನ್ನು, ಆಶಾಸ್ತೇ-ಬಯಸುವನು; ಹೇ ವರುಣ-ಎಲೈ ವರುಣನೇ, ಅಹೇಡಮಾನಃ-ಮುನಿಸಿಲ್ಲದವನಾಗಿ, ಇಹ-ಈ ಲೋಕದಲ್ಲಿ, ಬೋಧಿ-ನನ್ನ ಪ್ರಾರ್ಥನೆಯನ್ನು ಅಂಗೀಕರಿಸು; ಉರುಶಂಸ-ದೊಡ್ಡ ಕೀರ್ತಿಯುಳ್ಳವನೇ, ನಃ-ನಮ್ಮ, ಆಯುಃ-ಆಯುಸ್ಸನ್ನು, ಮಾಪ್ರಮೋಷೀಃ-ಹಾಳು

ಪಾಪವುಳ್ಳ, ನಾ ಜೀವನದಾಣ-ಎಲೈ ವರುಣದೇವನೇ, ಯತ್-ಯಾವ (ಚಿತ್, ಹಿ-ಅವ್ಯಯಗಳು) ವ್ರತಂ ಆರಾಧನಾರೂಪವಾದ ವ್ರತವನ್ನು, ದ್ಯವಿದ್ಯವಿ-ಪ್ರತಿ ದಿನದಲ್ಲಿಯೂ, ವಿಶೋಯಥಾ-ಪ್ರಜೆಗಳಂತೆ ತಿಳಿಯದ ಮನುಷ್ಯರಂತೆ, ಪ್ರಮಿನೀಮಸಿ-ನಾಶವಾಗುವವರಾಗಿ ಹೋಗುವೆವೋ; ದೇವರುಣ-ಎಲೈ ವರುಣನೇ, ದೈವ್ಯೇ ಜನೇ-ದೇವತೆಗಳಲ್ಲಿ, ಮನುಷ್ಯಾ-ಮನುಷ್ಯರಾದ ನಾವು, ಯತ್ಕಿಂಚ ಏನಾದರೂ, ಇದಂ-ಈ ಕರ್ಮವೇ, ಅಭಿದ್ರೋಹಂ-ದ್ರೋಹವನ್ನು, ತಪ್ಪನ್ನು, ಅಚಿತ್ತೀ-ತಿಳುವಳಿಕೆಯಿಲ್ಲ ದಿರುವುದರಿಂದ, ಚರಾಮಸಿ-ನಡೆಸುವೆವೋ, ಯತ್-ಯಾವ ಕಾರಣ ದಿಂದ, ತವ ನಿನ್ನ, ಧರ್ಮಾ-ಧರ್ಮವನ್ನು, ಯುಯೋಪಿಮ-ನಾಶ ಮಾಡಿದೆವೋ, ಹೇ ದೇವ ಎಲೈ ದೇವನೆ, ನಃ-ನಮ್ಮನ್ನು, ತಸ್ಮಾತ್-ಆ ಕಾರಣದಿಂದ ಉಂಟಾದ, ಏನಸಃ-ಪಾಪದಿಂದ ಹಿಂಸೆಮಾಡಬೇಡ, ಕಿತವಾಸಃ-ಜೂಜುಗಾರರ ಹಾಗೆ, ಯದ್ರಿರಿಪುರ್-ಜೂಜುಗಳಂತೆ, ದಿವಿ-ಕೆಟ್ಟ ನಡೆಯನ್ನು ನಡೆದೆವೋ, ಯತ್-ಯಾವ ಪಾಪವನ್ನು (ಪಾಪ ಅಧ್ಯಾಹಾರ) ಸತ್ಯಂ ತಿಳಿದು ಮಾಡಿದೆವೋ, ಯತ್-ಯಾವ ಯತ್-ಯಾವ ಪಾಪವನ್ನು, ತಿಳಿಯದೆ ಮಾಡಿದೆವೋ, ತಾಸರ್ವಾ ಆ ಪಾಪಗಳೆಲ್ಲವನ್ನು, ಶಿಥಿರೇವ ಸಡಿಲಮಾಡಿ, ಹರಿಸು ಪಾಪಗಳನ್ನು ದೂರಮಾಡು; ದೇವನಾಗ ದೇವ-ಎಲೈ ವರುಣದೇವನೇ, ಅಥಾ-ಬಳಿಕ, ತೇ ನಿನಗೆ. ಪ್ರಿಯನಾದ-ಇಷ್ಟನಾದವನಾಗಿ, ಸ್ಯಾಮ-ಆಗುತ್ತೇವೆ.

“ಮೃಳ್-ಪಾಲನೇ” ಎಂಬ ಧಾತುವಿಂದ ಹುಟ್ಟಿದ ಪದದ ಅರ್ಥಕ್ಕೆ ಚೇತನಾಚೇತನಾತ್ಮಕವಾದ ಸಮಸ್ತಲೋಕವನ್ನೂ ಪಾಲಿಸಿಕೊಂಡಿರುವ ಪರಮಾತ್ಮನೆಂದು ಹೇಳಲಾಗುವುದು. “ಅಜೀ ಕ್ಷತ್ರ” ಎಂಬುದರಿಂದುಂಟಾದ “ಕ್ಷತ್ರ” ಎಂಬುದಕ್ಕೆ ಶಕ್ತಿಯನ್ನು ಪಾಲಿಸುವನೆಂದು ಅಭಿಪ್ರಾಯ; ಶರಣ್ಯನಾದ ನೀನು ಶರಣಾಗತನಾದ ನನ್ನ ಕೋರಿಕೆಗಳನ್ನು ಕೊಟ್ಟು ಅನುಗ್ರಹಮಾಡುವುದರಿಂದ ಮನದಲ್ಲಿ ತೋಷವನ್ನು ನೆರವೇರಿಸುವವನು.

ಎಲೈ ವರುಣನೇ, ನೀನು ದರಣಾಮೊಕ್ಕನವಲ್ಲಿ ಮಾಡುಕಗೊಳ್ಳುವ ನಂಬುವುದು ಶಾಸ್ತ್ರೋಪಾಖ್ಯಾನಾದಿಗಳಲ್ಲಿ ಪ್ರಖ್ಯಾತವಾಗಿಲ್ಲವೇ! ಆದರಿಂದ ಈ ನನ್ನ ಪ್ರಾರ್ಥನೆಯನ್ನು ಲಾಲಿಸಿ ಈಗಲೇ ನನಗೆ ಮುಕ್ತಿಯನ್ನು ಕೊಡುವವನಾಗು; ನಿನ್ನನ್ನು ಆಶ್ರಯಿಸದಿರುವವನಿಗೆ ಉತ್ಕೃಷ್ಟ ಫಲವು ತಪ್ಪುತ್ತದಿಲ್ಲವಾದುದರಿಂದಲೇ ಜ್ಯೋತಿಷ್ಟೋಮಾದಿ ಯಾಗಾದಿ ಕರ್ಮಗಳನ್ನು ಮಾಡಿ ಸ್ವರ್ಗಸುಖರೂಪವಾದ ಫಲವನ್ನು ಪಡೆಯುವುದು. ಕರ್ಮಜ್ಞಾನಭಕ್ತಿವೈರಾಗ್ಯಗಳಲ್ಲಿ ಪ್ರಥಮಪರ್ವವಾದ ಕರ್ಮವನ್ನು ಆಚರಿಸುವವನಿಗೇ ಫಲವು ತಪ್ಪದಿರುವಾಗ, ಅಪಾರಕರುಣಾಶಾಲಿಯಾದ ನಿನ್ನನ್ನು ನಂಬಿದವನಿಗೆ ಫಲಪ್ರಾಪ್ತಿಯಾಗುವುದೆಂದು ಹೇಳತಕ್ಕದೇನಿದೆ. ಮೂಢನಾದ ನಾನು ತಿಳಿಯದೆಯಾಗಲಿ, ತಿಳಿದಾಗಲಿ ಬಹುಕಾಲದಿಂದ ಮಾಡಿರುವ ಅಕೃತ್ಯಕರಣ, ಕೃತ್ಯಾಕರಣ, ಭಗವದಪಚಾರ, ಭಾಗವತಾಪಚಾರ, ಅಸಹ್ಯಾಪಚಾರವೇ ಮೊದಲಾದ ಸಕಲವಿಧವಾದ ಕೊನೆಗಾಣದ ಅಪರಾಧಗಳನ್ನು ನೀನು ತಿಳಿದೂ ಕೂಡ ನನ್ನನ್ನು ದಂಡಿಸದೆ, "ನಾನು ನಿನ್ನ ಮರೆಹೊಕ್ಕಿರುವೆನು" ಎಂಬ ಮಾತ್ರದಲ್ಲಿಯೇ ತೃಪ್ತಿಪಟ್ಟು ನನ್ನ ಪಾಪಗಳೆಲ್ಲವನ್ನೂ ನಿರ್ಮೂಲನಮಾಡಿ ದೀನನಾದ ನನಗೆ ಪರಮಾಪ್ತನಾದ ನೀನು ಎಂದಿಗೂ ತಪ್ಪದಿರುವ ಸಿದ್ಧಿಗಳನ್ನು ನಾಶಿಕೊಂಡಿರುವಂತೆ ಪರಿಪಾಲಿಸಿ ನನ್ನನ್ನು ಪಾಲಿಸಬೇಕೆಂದು ದೃಢಭಕ್ತಿಯಿಂದ ನಿನ್ನನ್ನು ಹೊಗಳುತ್ತಿರುವೆನು.

ಇದು ಎಲ್ಲವೂ ಪ್ರಾತಸ್ಸಂಧ್ಯಾವಂದನೆಯಲ್ಲಿಯಂತೆ ನಡೆಸಲ್ಪಡತಕ್ಕದ್ದು.

**ಸಾಯಂಸಂಧ್ಯಾವಂದನಂ ಸಮಾಪ್ತಂ.**

---

# ಮಾಧ್ಯಾಹ್ನಿಕಕ್ರಮಂ.

ಮಾಧ್ಯಾಹ್ನಿಕವೆಂದರೆ ಮಧ್ಯಾಹ್ನದಲ್ಲಿ ಮಾಡತಕ್ಕಂಥ ಕರ್ಮವು. ಇದಕ್ಕೂ ಸಂಧ್ಯಾವಂದನೆಗಳಿಗೂ ಇರುವ ವ್ಯತ್ಯಾಸದ ಮಟ್ಟಿಗೆ ಇಲ್ಲಿ ಸೂಚಿತವಾಗಿರುವುದು.

೧. ಸಂಕಲ್ಪಃ :—

**ಶ್ರೀಭಗವದಾಜ್ಞಯಾ........................................ ಮಾಧ್ಯಾಹ್ನಿಕಂ ಕರಿಷ್ಯೇ.**

೨. ಅಪ್ರೋಕ್ಷಣಮಂತ್ರಃ :—

**ಆಪಃ ಪುನಂತು ಪೃಥಿವೀಂ ; ಪೃಥಿವೀ ಪೂತಾ ಪುನಾತು ಮಾಂ ; ಪುನಂತು ಬ್ರಹ್ಮಣಸ್ಪತಿರ್ಬ್ರಹ್ಮಪೂತಾ ಪುನಾತುಮಾಂ; ಯದುಚ್ಛಿಷ್ಟಮಭೋಜ್ಯಂ ಯದ್ವಾ ದುಶ್ಚರಿತಂ ಮಮ ; ಸರ್ವಂ ಪುನಂತು ಮಾಮಾಪೋಽಸತಾಂಚ ಪ್ರತಿಗ್ರಹಗ್ಂ ಸ್ವಾಹಾ.**

ಆಪಃ-ನೀರುಗಳು, ಪೃಥಿವೀಂ-ಭೂಮಿಯನ್ನು, ಪುನಂತು-ಪರಿಶುದ್ಧವನ್ನಾಗಿ ಮಾಡಲಿ. ಪೂತಾ-ಪರಿಶುದ್ಧವಾದ, ಪೃಥಿವೀ ಭೂಮಿಯು, ಮಾಂ-ನನ್ನನ್ನು, ಪುನಾತು-ಪರಿಶುದ್ಧನನ್ನಾಗಿ ಮಾಡಲಿ; ಬ್ರಹ್ಮಣಃ ಚತುರ್ಮುಖನಿಗೆ, ಸೇರಿದ, ಪತಿಃ-ಸ್ವಾಮಿಯಾದ ನಾರಾಯಣನು. ಪುನಂತು (ನನ್ನನ್ನು) ಪರಿಶುದ್ಧನನ್ನಾಗಿ ಮಾಡಲಿ ; ಬ್ರಹ್ಮಪೂತಾ-ವೇದವಾಕ್ಯದಿಂದ ಪರಿಶುದ್ಧವಾದಲ್ಲಿನ್ನು, ಜಲಗಳು, ಮಾಂ-ನನ್ನನ್ನು, ಪುನಾತು-ಪರಿಶುದ್ಧನನ್ನಾಗಿ ಮಾಡಲಿ; ಯತ್ ಯಾವ, ಉಚ್ಛಿಷ್ಟಂ-ಎಂಜಲಿನಿಂದ ತಿನ್ನಲ್ಪಟ್ಟಿತೋ, ಅಭೋಜ್ಯಂ ತಿನ್ನಬಾರದುದು ತಿನ್ನಲ್ಪಟ್ಟಿತೋ, ಯದ್ವಾ-ಯಾವುದೊಂದು, (ವಾ-ಅಥವಾ) ಮಮ-ನನಗೆ, ದುಶ್ಚರಿತಂ-ದುರಾಚಾರವೋ, ಅಸತಾಂ-ಅಯೋಗ್ಯರಿಂದ, ಪ್ರತಿಗ್ರಹಂ-ದಾನವನ್ನು ತೆಗೆದುಕೊಂಡುದು

ಉಂಟೋ, ಸರ್ವಂಚ-ಈ ಎಲ್ಲಾ ಪಾತಕಗಳನ್ನೂ; ಆಪಃ-ನೀರು, ಪುನಂತು-ಪರಿಶುದ್ಧವನ್ನಾಗಿಮಾಡಲಿ; ಮಾಂ ಚ-ಈ ಮೂಲಕವಾಗಿ ನನ್ನನ್ನೂ ಕೂಡ ಪರಿಶುದ್ಧನನ್ನಾಗಿ ಮಾಡಲಿ, ಸ್ವಾಹಾ-ಇದು ಆಹುತಿ ಮಂತ್ರವು.

ಎಂಜಲನ್ನು ತಿನ್ನುತ್ತಿರುವುದರಿಂದ ದೇಹದ ಆರೋಗ್ಯವು ಕೆಡುವುದು. ದೇಹಾರೋಗ್ಯವು ಕೆಡುವುದರಿಂದ ಮನಸ್ಸು ಕೆಟ್ಟುಹೋಗುವುದು. ತಿನ್ನಬಾರದುದನ್ನು ತಿನ್ನುವುದರಿಂದಲೂ ಶರೀರಾರೋಗ್ಯವು ಹಾಳಾಗಿ ಬುದ್ಧಿಯೂ ಸಂಕೋಚವಾಗುವುದು. ಈ ವಿಚಾರದಲ್ಲಿ ಶಾಸ್ತ್ರಕಾರರು ಬಹು ಖಂಡಿತವಾಗಿ ಕಟ್ಟಳೆಗಳನ್ನು ನಿಯಮಿಸಿರುವರು. ಅಯೋಗ್ಯರಾದವರಿಂದ ದಾನವನ್ನು ತೆಗೆದುಕೊಳ್ಳುವುದು ಮಹಾಪಾಪವೆಂದು ಹಿರಿಯರು ಹೇಳುವರು. ಈ ಮೇಲೆ ಕಂಡ ಮೂರು ಬಗೆಯಾದ ಅಕಾರ್ಯಗಳನ್ನು ಮಾಡುವುದರಿಂದ ಮನುಷ್ಯನಿಗೆ ಹೆಚ್ಚಾಗಿ ಪಾಪ ಕಾರ್ಯಗಳನ್ನು ಮಾಡತಕ್ಕ ಸಂಭವವುಂಟಾಗುವುದು. ಜಲವು ನೆಲದ ಮೇಲೆ ಬೀಳುವುದರಿಂದ ಭೂಮಿಯ ಮೇಲಿರುವ ಕೊಳಕೆಲ್ಲಾ ಹೋಗಿ ಆ ನೆಲವು ಫಲವತ್ತಾಗುವುದು. ಭೂಮಿಯ ಮೇಲೆ ಬಿದ್ದ ನೀರನ್ನು ಕುಡಿವುದರಿಂದ ಮನುಷ್ಯನು ವೃದ್ಧಿಯನ್ನು ಹೊಂದುವನು.

“ಆಪ್ನುವಂತಿ ಇತ್ಯಾಪಃ” ಎಲ್ಲರಿಂದಲೂ ಪೂಜ್ಯವು ಹೊಂದಲ್ಪಡುವುದೋ ಅದಕ್ಕೆ ಆಪವೆಂದು ಹೆಸರು. ಇದರಿಂದ ಪರಮಾತ್ಮನು ನಿರ್ದಿಷ್ಟನಾಗುವನು. ಜಲವು ಪರಮಾತ್ಮನಿಗೆ ಮುಖ್ಯಸ್ಥಾನವಾದುದರಿಂದಲೂ, ಪರಮಾತ್ಮನು ಭೂಮಿಮಂಡಲಕ್ಕೆ ಒಡೆಯನಾದುದರಿಂದಲೂ, ಜಲವೂ ಭೂಮಿಯೂ ಪಾವನವಾದುವು ಎಂಬುದರಲ್ಲಿ ಸಂಶಯವಾವುದೂ ಇಲ್ಲ. ಈ ಮಂತ್ರಪಠನೆಯಿಂದ ಜೀವನು ತಾನು ಮನಸ್ಸಿನಿಂದಲೂ ವಾಕ್ಕಿನಿಂದಲೂ, ಕಾರ್ಯದಿಂದಲೂ ಮಾಡಿದ ಮೂರುತೆರನಾದ ಪಾತಕಗಳನ್ನೂ ನಾಶಗೊಳಿಸಿ ತನ್ನನ್ನು ಉದ್ಧಾರ ಮಾಡೆಂದು ಪರಮಾತ್ಮನಲ್ಲಿ ಮೊರೆಯಿಟ್ಟು ಆತ್ಮಸಮರ್ಪಣೆಯನ್ನು ಮಾಡುವನು.

ಬಳಿಕ ೨ ಅರ್ಘ್ಯಗಳು.

೧ ಪ್ರಾಣಾಯಾಮವು.

೧ ಅರ್ಘ್ಯವು.

ತರುವಾಯ ಮಿಕ್ಕವೆಲ್ಲವನ್ನೂ ಸಂಧ್ಯಾವಂದನೆಯ ಕಾಲದಲ್ಲಿ ಮಾಡಿದಂತೆಯೇ ಮಾಡಿ ಜಪವನ್ನು ಪೂರೈಸಿ.

೫. ಉಪಸ್ಥಾನವು.

**ಶ್ರೀಭಗವದಾಜ್ಞಯಾ.......... ಮಾಧ್ಯಾಹ್ನಿಕೋಪಸ್ಥಾನಂ ಕರಿಷ್ಯೇ.**

ಸೂರ್ಯಾಭಿಮುಖನಾಗಿ ನಿಂತುಕೊಂಡು ತನ್ಮಂಡಲಮಧ್ಯದಲ್ಲಿ ಇರುವ ಪರಮಾತ್ಮನನ್ನು ಮನದಲ್ಲಿ ಧ್ಯಾನಿಸುತ್ತ.

**ಉತ್ತಮೇ ಶಿಖರೇ...........ಯಥಾಸುಖಂ.**

**ಆಸತ್ಯೇನ ರಜಸಾ ವರ್ತಮಾನೋ ನಿವೇಶಯನ್ ಅಮೃತಂ ಮರ್ತ್ಯಂಚ; ಹಿರಣ್ಯಯೇನ ಸವಿತಾರಥೇನ ಆದೇವೋ ಯಾತಿ ಭುವನಾವಿಪಶ್ಯನ್; ಉದ್ವಯಂ ತಮಸಸ್ಪರಿ ಪಶ್ಯಂತೋ ಜ್ಯೋತಿರುತ್ತರಂ; ದೇವಂ ದೇವತ್ರಾಸೂರ್ಯಮಗನ್ಮಜ್ಯೋತಿರುತ್ತಮಂ; ಉದುತ್ಯಂ ಜಾತವೇದಸಂ ದೇವಂ ವಹಂತಿ ಕೇತವಃ; ದೃಶೇ ವಿಶ್ವಾಯ ಸೂರ್ಯಂ; ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ; ಅಪ್ರಾದ್ಯಾವಾ ಪೃಥಿವೀ ಅಂತರಿಕ್ಷಂ ಸೂರ್ಯ ಆತ್ಮಾಜಗತಸ್ತಸ್ಥುಷಶ್ಚ; ತಚ್ಚಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್; ಪಶ್ಯೇಮ ಶರದಶ್ಶತಂ; ಜೀವೇಮ ಶರದಶ್ಶತಂ; ನಂದಾಮ ಶರದಶ್ಶತಂ; ಮೋದಾಮ ಶರದಶ್ಶತಂ; ಭವಾಮ ಶರದಶ್ಶತಂ; ಶೃಣವಾಮ ಶರದಶ್ಶತಂ; ಪ್ರಬ್ರವಾಮ ಶರದಶ್ಶತಂ; ಅಜೀತಾಸ್ಯಾಮ ಶರದಶ್ಶತಂ; ಜ್ಯೋಕ್ಚ ಸೂರ್ಯಂ ದೃಶೇ; ಯ ಉದಗಾತ್ ಮಹತೋರ್ಣವಾತ್ ವಿಭ್ರಾಜಮಾನಸ್ಸರಿರಸ್ಯ ಮಧ್ಯಾತ್ ಸಮಾ ವೃಷಭೋ ಲೋಹಿತಾಕ್ಷಸ್ಸೂರ್ಯೋ ವಿಪಶ್ಚಿನ್ಮನಸಾ ಪುನಾತು.**

ಕೃಷ್ಣೇನ-ಕಾಲದಿಂದುಂಟಾಗುವ ವ್ಯತ್ಯಾಸವನ್ನು ಹೊಂದುವ ತನ್ನ ಬೆಳಕಿನಿಂದ, ರಜಸಾ-ತ್ರಿಗುಣವಿಶಿಷ್ಟವಾದ ಲೀಲಾವಿಭೂತಿಯೊಡನೆ ಕೂಡಿಕೊಂಡವನು, ಆವರ್ತಮಾನಃ-ಯುಗಾದಿಗಳಲ್ಲಿ ಬರುವವನಾದ, ದೇವಃ ಸವಿತಾ-ಸವಿತೃಪರಮಾತ್ಮನು, ಅಮೃತಂ-ನಿತ್ಯಮುಕ್ತರಿಗೆ ಬ್ರಹ್ಮಾನುಭವವನ್ನು, ಮರ್ತ್ಯಂಚ-ಮನುಷ್ಯರಿಗೆ ಐಶ್ವರ್ಯಕೈವಲ್ಯಸ್ವರ್ಗಪುತ್ರಾದಿ ರೂಪವಾದ ಐಹಿಕಫಲವನ್ನು, ನಿವೇಶಯನ್-ಕೊಡುವವನಾಗಿ, ಹಿರಣ್ಮಯೇನ-ಸ್ವರ್ಣಮಯವಾದ, ರಥೇನ-ಗರುಡನೆಂಬ ರಥದಿಂದ, ಭುವನಾನಿ-ಲೋಕಗಳನ್ನು, ಪಶ್ಯನ್-ಅವರವರ ಕರ್ಮಕ್ಕೆ ತಕ್ಕಂತೆ ನಿಯಮಿಸುತ್ತ ನೋಡುತ್ತ, ಆ ಎಲ್ಲೆಡೆಯಲ್ಲಿಯೂ, ಯಾತಿ-ಸಂಚರಿಸುತ್ತಾನೆ-(ಇಂಥವನನ್ನು ನಾನು ಉಪಾಸನೆಮಾಡುವೆನು.) ತಮಸಸ್ಪರಿ-ಪ್ರಕೃತಿಗೆ ಮೇಲಿರುವ, ಅಂಧಕಾರವನ್ನು ಹೋಗಗೊಳಿಸುವ, ಉತ್ತರಂ-ಉತ್ಕೃಷ್ಟತರವಾದ, ಜ್ಯೋತಿಃ-ತೇಜೋರೂಪನಾದ ಪರಮಾತ್ಮನನ್ನು, ಉತ್ಪಶ್ಯಂತಃ-ಧ್ಯಾನಿಸುತ್ತಲಿರುವ, ವಯಂ-ನಾವು, ದೇವತ್ರಾ ದೇವತೆಗಳಲ್ಲಿರುವ, (ಇಲ್ಲಿ ದೇವಶಬ್ದವು ಸರ್ವವಸ್ತುಗಳಿಗೂ ಉಪಲಕ್ಷಣವು) ಉತ್ತಮಂ ದೇವಂ-ಉತ್ಕೃಷ್ಟತಮನಾದ ದೇವನಾದ, ಜ್ಯೋತಿಃ ತೇಜೋರೂಪನಾದ, ಸೂರ್ಯಂ-ಪರಮಾತ್ಮನನ್ನು, ಅಗನ್ಮ ಹೊಂದುವೆವು (ಉದುತ್ಯಂ = ಉತ್ + ಉ + ತ್ಯಂ) ಉ ಅವ್ಯಯವು, ತ್ಯಂ-ಪ್ರಸಿದ್ಧನಾದ, ಜಾತವೇದಸಂ-ಸಕಲ ಚರಾಚರಕ್ಕೂ ಕಾರಣಭೂತನಾದ, ಅಂತರ್ಯಾಮಿಯಾದ, ದೇವಂ ಸೂರ್ಯಂ-ಸೂರ್ಯದೇವನನ್ನು, ಕೇತವಃ-ಕಿರಣಗಳಂತೆ ಬೆಳಗುತ್ತಿರುವ ದಿವ್ಯಾತ್ಮಜ್ಞಾನಶಕ್ತಿಶಾಂತ್ಯಾದಿ ಗುಣಗಳು, ದೃಶೇ ವಿಶ್ವಾಯ ಎಲ್ಲ ಜನರಿಗೂ ತೋರಿಸಲೋಸುಗ, ಉದ್ವಹಂತಿ-ವಹಿಸುತ್ತಲಿವೆ; (ಇಂತಹ ಪರಮಾತ್ಮನನ್ನು ಸ್ತುತಿಸುವೆನು.) ದೇವಾನಾಂ-ದೇವತೆಗಳಿಗೆ, ಚಿತ್ರಂ-ಆಶ್ಚರ್ಯಕರವಾದ, ಅನೀಕಂ-ತೇಜಸ್ಸು, ಉದಗಾತ್ ಉದಯಿಸಿತು, ಮಿತ್ರಸ್ಯವರುಣಸ್ಯಾಗ್ನೇಃ-ಸೂರ್ಯ ವರುಣ ಅಗ್ನಿ ಮೊದಲಾದ ದೇವತೆಗಳಿಗೆ, ಚಕ್ಷುಃ-ಕಣ್ಣಿನಂತಿರುವ (ಜ್ಞಾನಪ್ರದನಾದ), ಸೂರ್ಯಃ-ಸೂರ್ಯ ಪರಮಾತ್ಮನು, ದ್ಯಾವಾಪೃಥಿವೀ ಅಂತರಿಕ್ಷಂ-ಸ್ವರ್ಗ ಭೂಮಿ ಆಕಾಶ

ಮುಂತಾದ ವಸ್ತುಸಮೂಹವನ್ನು, ಆಪ್ರಾಃ-ವ್ಯಾಪಿಸುವವನಾಗಿ, ಜಗತಃ-ಜಂಗಮಕ್ಕೆ, ತಸ್ಥುಷಃ-ಸ್ಥಾವರಕ್ಕೆ, ಆತ್ಮಾ-ವ್ಯಾಪಕ ನಾಗಿರುವನು (ಅಂತರ್ಯಾಮಿ ಉಪಾಸ್ಯನು) ತತ್-ಆ ಶ್ರುತಿಪ್ರಸಿದ್ಧ ನಾದ, ಚಕ್ಷುಃ-ಎಲ್ಲರಿಗೂ ಜ್ಞಾನವನ್ನು ಕೊಡುವವನಾದ, ದೇವಹಿತಂ-ದೇವತೆಗಳಿಗೆ ಒಳ್ಳೆಯದನ್ನು ಮಾಡುವವನಾದ, ಉಚ್ಚರತ್-ಸಾಕ್ಷಾತ್ಕೊಂ ಡದ, ಶುಕ್ರಂ-ಶುದ್ಧನಾದ ಸ್ವರೂಪವನ್ನು, ಪುರಸ್ತಾತ್-ಎದುರಿಗೆ, ಪಶ್ಯೇಮ ಶರದಶ್ಶತಂ-ನೂರು ವರ್ಷಗಳು ಸಾಕ್ಷಾತ್ಕರಿಸುವೆವು, ಜೀವೇಮ ಶರದಶ್ಶತಂ-ನೂರು ವರ್ಷಗಳು ಜೀವಿಸುವೆವು, ನಂದಾಮ ಶರದಶ್ಶತಂ-ನೂರು ವರ್ಷಗಳು ಒಳ್ಳೆಯ ಮಕ್ಕಳೊಡನೆಯೂ ಶಿಷ್ಯ ರೊಡನೆಯೂ ಸಂತೋಷಪಡುವೆವು. ಮೋದಾಮ ಶರದಶ್ಶತಂ-ನೂರು ವರ್ಷಗಳು ಸಂತೋಷದ ಚರಮಾವಸ್ಥೆಯನ್ನು ಹೊಂದುವೆವು, ಭವಾಮ ಶರದಶ್ಶತಂ-ನೂರು ವರ್ಷಗಳು ಉತ್ತರೋತ್ತರಾಭಿವೃದ್ಧಿಯನ್ನು ಹೊಂದು ವೆವು, ಶೃಣವಾಮ ಶರದಶ್ಶತಂ-ನೂರು ವರ್ಷಗಳು ಭಗವತ್ಕಥೆಗಳನ್ನು ಕೇಳುವೆವು. ಪ್ರಬ್ರವಾಮ ಶರದಶ್ಶತಂ-ನೂರು ವರ್ಷಗಳು ಜಿಜ್ಞಾಸು ವ್ಯಕ್ತಿಗಳೊಡನೆ ಜ್ಞಾನವನ್ನು ನುಡಿಯುವೆವು, ಅಜೀತಾಸ್ಯಾಮ ಶರದಶ್ಶತಂ-ನೂರು ವರ್ಷಗಳು ದೇಹವಿರೋಧಿಗಳಿಂದ ಜಯಿಸಲ್ಪಡುವುದಿಲ್ಲ, ಚ-ಮತ್ತು, ಜ್ಯೋಕ್-ಬಹುಕಾಲ, ಸೂರ್ಯಂ-ಸೂರ್ಯಾಂತರ್ಯಾಮ್ಯಾತ್ಮ ನನ್ನು, ದೃಶೇ-ನೋಡಲಿಕ್ಕೆ ಬಯಸುವೆವು, ಯಃ-ಯಾರು, ಮಹತಃ-ದೊಡ್ಡದಾದ, ಅರ್ಣವಾತ್-ಸಮುದ್ರದ ಮಧ್ಯದಿಂದ, ಉದಗಾತ್-ಉದಯವಾಗುವನೋ, ಸಲಿಲಸ್ಯ ಮಧ್ಯಾತ್-ನೀರಿನ ನಡುವೆ, ವಿಭ್ರಾಜ ಮಾನಃ-ಚೆನ್ನಾಗಿ ಪ್ರಕಾಶಿಸುತ್ತಿರುವ, ವೃಷಭಃ-ಎಲ್ಲರಿಗೂ ಶ್ರೇಷ್ಠ ನಾದ, ಅಭಿಮುಖರಾದ ಭಕ್ತರ ಸಂಸಾರತಾಪವನ್ನು ನಿವಾರಣೆ ಮಾಡುವ, ಲೋಹಿತಾಕ್ಷಃ-ಪುಂಡರೀಕಾಕ್ಷನಾದ, ವಿಪಶ್ಚಿತ್-ಸರ್ವಜ್ಞ ನಾದ, ಸಃ-ಮೇಲೆ ಹೇಳಿದ, ಸೂರ್ಯಃ-ಸೂರ್ಯಾಂತರ್ಯಾಮ್ಯಾತ್ಮನು, ಮನಸಾ-ತನ್ನ ಸಂಕಲ್ಪದಿಂದ, ಮಾ-ನನ್ನನ್ನು, ಪುನಾತು-ಶೋಧಿಸಲಿ, ಪ್ರತಿಬಂಧಕನಿವೃತ್ತಿಯನ್ನು ಮಾಡಿ ಸ್ವಾನುಭವವನ್ನು ಹೊಂದಲು ಯೋಗ್ಯನಾಗುವಂತೆ ಮಾಡಲಿ.

ಕಾಲದಿಂದುಂಟಾಗುವ ವ್ಯತ್ಯಾಸಗಳೊಂದೂ ಇಲ್ಲದ ಪರಮಪದದಲ್ಲಿಯೂ, ರಜೋಗುಣದಿಂದ ಕೂಡಿದ ಲೀಲಾವಿಭೂತಿಯಲ್ಲಿಯೂ ಸರ್ವದಾ ಇರುತ್ತಿರುವ ಪರಮಾತ್ಮನು, ಸಕಲಪ್ರಾಣಿಗಳನ್ನೂ ಅವರವರ ಕರ್ಮಕ್ಕೆ ತಕ್ಕಂತೆ ಪ್ರೇರಣೆಗೆಯ್ಯುತ್ತ, ಮೋಕ್ಷವನ್ನು ಬಯಸುವರಿಗೆ ಮೋಕ್ಷವನ್ನೂ, ಸುಖಾನುಭವದಲ್ಲಿ ಆಸೆಯುಳ್ಳವರಿಗೆ ಐಹಿಕಸುಖವನ್ನೂ ಕೊಡುತ್ತ, ಲೋಕವನ್ನು ಪರಿಪಾಲಿಸುತ್ತಲಿರುವನು. ಸರ್ವವ್ಯಾಪಕನಾದ, ಅಪ್ರಾಕೃತದಿವ್ಯ ಮಂಗಳವಿಗ್ರಹನಾದ ಪರಮಾತ್ಮನನ್ನು ಉಪಾಸನೆ ಮಾಡುವುದರಿಂದ ಚೇತನರು ಪರಮಪದವನ್ನು ಹೊಂದುವರು. ಪರಮಾತ್ಮನು ವೈಕುಂಠದಲ್ಲಿ ನಿತ್ಯರೊಡನೆಯೂ ಮುಕ್ತರೊಡನೆಯೂ, ನಿರತಿಶಯಾನಂದವನ್ನು ಅನುಭವಿಸುತ್ತ, ಭೂಲೋಕದಲ್ಲಿ ತಾಪತ್ರಯದಿಂದ ಬಳಲಿ ಬ್ರಹ್ಮಾನಂದದ ಸೊಗಸನ್ನೇ ಅರಿಯದೆ ಹೇಯವಾದ ಇಂದ್ರಿಯಸೌಖ್ಯದಲ್ಲಿ ನಿರತರಾಗಿ, ಬಹುಸಂಕಟಪಡುತಲಿರುವ ಪ್ರಾಣಿಗಳನ್ನು ಕಟಾಕ್ಷಿಸಿ ನಿರವಧಿಕವಾತ್ಸಲ್ಯಕಾರುಣ್ಯಾದಿಗುಣಪೂರ್ಣನಾದುದರಿಂದ, ಈ ಜೀವಿಗಳನ್ನು ರಕ್ಷಿಸಬೇಕೆಂದು ನಿಶ್ಚಯಿಸಿ ವೈಕುಂಠವನ್ನು ಬಿಟ್ಟು ಈ ಭೂಮಂಡಲದಲ್ಲಿಯೇ ರಾಮಕೃಷ್ಣಾದ್ಯವತಾರಗಳನ್ನು ಮಾಡಿ, ಮತ್ಸ್ಯಕೂರ್ಮಗಳೆಂಬ ತನ್ನ ಮೂರ್ತಿಭೇದದಿಂದಲೂ, ಭರತಶತ್ರುಘ್ನರೆಂಬ ಪರಿಕರಗಳಿಂದಲೂ ಸೇನೆಯಂತೆ ಕಾಣಿಸಿಕೊಂಡು, ಹಗೆಗಳನ್ನು ಸಂಹರಿಸಿ ದೇವತೆಗಳಿಗೆ ಉತ್ಸಾಹವಾಗಿ, ತನ್ನ ಸಂಕಲ್ಪವನ್ನು ಪೂರಯಿಸಿದನು; ಸರ್ವವ್ಯಾಪಿಯಾಗಿ ಎಲ್ಲರಿಗೂ ಜ್ಞಾನವನ್ನೀವನಾಗಿ, ಸಕಲರಿಗೂ ಹಿತವನ್ನು ಮಾಡುತ ರಕ್ಷಿಸುವ ಪರಮಾತ್ಮನನ್ನು ಧ್ಯಾನಪೂರ್ವಕವಾಗಿ ಕೀರ್ತಿಸುತ್ತ ಬಹುಕಾಲ ಐಶ್ವರ್ಯ ಸುಖವನ್ನನುಭವಿಸುವಂತೆ ತನಗೆ ಅನುಗ್ರಹಮಾಡಬೇಕೆಂದು ಚೇತನನು ಬೇಡಿಕೊಳ್ಳುವನು. ಸಕಲಕಲ್ಯಾಣಗುಣವಿಶಿಷ್ಟನಾದ ಪರಮಾತ್ಮನು ಚೇತನನಿಗೊದಗುವ ವಿಘ್ನಗಳನ್ನು ಹಾಳುಮಾಡಿ ಸ್ವಾನುಭವವನ್ನು ಹೊಂದುವುದಕ್ಕೆ ಶಕ್ಯವನನ್ನಾಗಿ ಮಾಡಬೇಕೆಂದು ಈ ಮಂತ್ರದಲ್ಲಿ ಚೇತನನು ಭಗವಂತನನ್ನು ಒಂದೇಮನಸ್ಸಿನಿಂದ ಪ್ರಾರ್ಥನೆ

ಮಾಡುವರು.

ಮಿಕ್ಕುದೆಲ್ಲವನ್ನು ಸಂಧ್ಯಾವಂದನೆಯಂತೆಯೇ ಮಾಡುವುದು.

## ಮಾಧ್ಯಾಹ್ನಿಕಕ್ರಮಂ ಸಂಪೂರ್ಣಂ

---

## --: ಯಜುಸ್ಸಂಧ್ಯಾಭಾಷ್ಯವಿವರಣಂ ಸಂಪೂರ್ಣಂ :-

### ಅಚ್ಚಿನ ತಪ್ಪುಗಳು

| ಪುಟ | ಪಙ್ಕ್ತಿ | ತಪ್ಪು | ಸರಿ |
|---|---|---|---|
| 16 | 8 | ಶೌಚಪ್ರಕ್ಷಿತು | ಶೌಚಪ್ರಕ್ಷೈತು |
| 22 | 18-19 | ಮತಯು | ಮೃತಯು |
| 24 | 8 | ಕಾಲಿಯಾದ್ದ | ಕಾಲಿಯಾದ |
| " | 9 | ಶೌಚತಕು | ಶೌಚತಕ್ಕು |
| " | 19 | ಮಿಕ್ಕುದೆಲ್ಲವು | ಮಿಕ್ಕದೆಲ್ಲವು |
| 27 | 25 | ವಿಭ್ಯಾಜಮಾನ | ವಿಭ್ರಾಜಮಾನ |
| 30 | 15 | ಮಾಡ್ರಿ | ಮಾಡಿ |
| " | 16 | ರತುಷ | ರತ್ನುಷ್ಯ |